
ಕೋಟಿ ಚೆನ್ನಯ

ಡಾ. ವಾಮನ ನಂದಾವರ



ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ

ಮಕ್ಕಳಿಗಾಗಿ ತುಳುಕತೆಗಳು

ಕನ್ನಡ : 'ಮಕ್ಕಳಿಗಾಗಿ ಕತೆಗಳು' ಮಾಲಿಕೆಯಲ್ಲಿ
ಕೋಟಿ ಚೆನ್ನಯ - ಲೇಖಕರು : ಡಾ. ವಾಮನ ನಂದಾವರ
ದೃಶ್ಯ, ಗೊಲ್ಲಚ್ಚಿಲ್, ಮಂಗಳೂರು - 575 006.
ಪ್ರಕಾಶಕರು - ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಮಂಗಳೂರು

ಕನ್ನಡ ದ್ವಿತೀಯ ಮುದ್ರಣ	:	2007
ಬೆಲೆ	:	ರೂ.25
ಪುಟಗಳು	:	32
ಪ್ರಧಾನ ಸಂಪಾದಕ	:	ಯಮ್. ಕೆ. ಸೀತಾರಾಮ್ ಕುಲಾಲ್ ಅಧ್ಯಕ್ಷರು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
ಪ್ರಕಾಶಕರು	:	ಎಸ್. ಎಚ್. ಶಿವರುದ್ರಪ್ಪ ರಿಜಿಸ್ಟ್ರಾರ್ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಮಹಾನಗರ ಪಾಲಿಕೆ ಕಟ್ಟಡ ಲಾಲ್‌ಬಾಗ್, ಮಂಗಳೂರು - 3. ದೂರವಾಣಿ / ಫ್ಯಾಕ್ಸ್ : 0824- 2459389 Email: tuluacademy@yahoo.co.in
ಹಕ್ಕುಗಳು	:	ಲೇಖಕರು
ಮುದ್ರಣ	:	ಅರುಣಾ ಪ್ರಿಂಟರ್ಸ್ ಕುದ್ರೋಳಿ, ಮಂಗಳೂರು - 575 003. Ph : 0824-2494925.
ಮುಖಪುಟ ಮತ್ತು ಒಳಚಿತ್ರಗಳು	:	ಗೋಪಾಡ್ಕರ್

ಮಕ್ಕಳಿಗಾಗಿ ಕತೆಗಳು - ೧

ಮಕ್ಕಳಿಗಾಗಿ ಕತೆ

ಕೋಟಿ ಚೆನ್ನಯ

ಡಾ. ವಾಮನ ನಂದಾವರ

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ

ಮಹಾನಗರ ಪಾಲಿಕೆ ಕಟ್ಟಡ, ಲಾಲ್‌ಬಾಗ್, ಮಂಗಳೂರು - 575003.

ದೂರವಾಣಿ / ಫ್ಯಾಕ್ಸ್ : 0824- 2459389

Email: tuluacademy@yahoo.co.in

ಅಧ್ಯಕ್ಷರ ಮೊದಲ ಮಾತು

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯು ಈ ಹಿಂದೆ ಅಚ್ಚು ಹಾಕಿಸಿದ, ಪ್ರಚಾರದಲ್ಲಿರುವ ಕೆಲವೊಂದು ಮಕ್ಕಳ ಕತೆಗಳನ್ನು ಈ ಬಾರಿ ಕನ್ನಡ ಭಾಷೆಗೆ ಅನುವಾದಿಸಿದೆ. ನಮ್ಮ ಹಿರಿಯರು ಮಕ್ಕಳಿಗೆ ಹೇಳುತ್ತಿದ್ದ, ವಾಡಿಕೆಯಲ್ಲಿ ಅಜ್ಜಿ ಕತೆಗಳು ಎಂದು ಕರೆಯಲ್ಪಡುವ ಸಣ್ಣ ಸಣ್ಣ ಕತೆಗಳು ಈಗ ತುಳು ಭಾಷೆಯಲ್ಲಿದ್ದ ಅದನ್ನು ಕನ್ನಡಕ್ಕೆ ಅನುವಾದ ಮಾಡಲಾಗಿದೆ. ತುಳು ಭಾಷೆಯು ಮೌಖಿಕ ಸಾಹಿತ್ಯದಲ್ಲಿ ಸಾಕಷ್ಟು ಪ್ರಚಾರಗೊಂಡಿದ್ದು, 1998ನೇ ಇಸವಿಯಲ್ಲಿ ತುಳು ಭಾಷೆಯಲ್ಲಿ ಅಕಾಡೆಮಿಯು ಅಚ್ಚುಗೊಳಿಸಿದ ಪುಸ್ತಕಗಳಲ್ಲಿ ಆರನ್ನು ಆಯ್ದು ಕನ್ನಡಕ್ಕೆ ಭಾಷಾಂತರಿಸಲಾಗಿದೆ. ಕೋಟಿಚೆನ್ನಯ ಕತೆ ಈಗಾಗಲೇ 2004ರಲ್ಲಿ ಮಕ್ಕಳಿಗಾಗಿ ಕತೆಗಳು ಮಾಲಿಕೆಯಲ್ಲಿ ಮೊದಲನೆಯ ಕತೆಯಾಗಿ ಪ್ರಕಟಗೊಂಡಿರುತ್ತದೆ. ಆದರೆ ಅದರ ಪ್ರತಿಗಳು ಮುಗಿದು ಹೋಗಿರುವುದರಿಂದ ಅದು ದ್ವಿತೀಯ ಮುದ್ರಣವಾಗಿ ಮತ್ತೆ **ಕೋಟಿಚೆನ್ನಯ** ಎಂಬ ಹೆಸರಿನಿಂದ ಅಚ್ಚಾಗಿ ಮಕ್ಕಳ ಕೈ ಸೇರುತ್ತಿದೆ.

ತುಳು ಭಾಷೆಯ ಮಕ್ಕಳ ಸಾಹಿತ್ಯ ಕನ್ನಡ ಭಾಷೆಯಲ್ಲೇ ವಿರಳವಾಗಿರುವಾಗ, ತುಳುವಿನಲ್ಲಿ ದೊರೆಯುವುದು ಅಸಾಧ್ಯ. ಈ ಕಾರಣದಿಂದ ಆಯ್ದ ಆರು ಪುಸ್ತಕಗಳು ಮಕ್ಕಳ ಅನುಕೂಲಕ್ಕಾಗಿ ತುಳುವಿನ ಬಗ್ಗೆ ಅಭಿಮಾನ, ಗೌರವ ಮೂಡಿಸಲಿಕ್ಕಾಗಿ ಕನ್ನಡಕ್ಕೆ ಅನುವಾದಗೊಂಡು ಹೊರತರಲಾಗಿದೆ.

ಈ ಆರು ಕತೆಗಳು ಒಂದೊಂದು ರೀತಿಯ ಅಜ್ಜಿ ಕತೆಗಳಾದರೂ, ಮಕ್ಕಳಿಗೆ ನೀತಿಯ ಪಾಠದ ಅರಿವು ಮೂಡಿಸುತ್ತದೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷರಾದ ದಿ. ಅ. ಬಾಲಕೃಷ್ಣ ಶೆಟ್ಟಿ ಪೊಳಲಿಯವರ ಅವಧಿಯಲ್ಲೇ ಲೇಖಕರಿಂದಲೇ ಭಾಷಾಂತರ (ಅನುವಾದ)ಗೊಂಡು ಹಸ್ತಪ್ರತಿಗಳಾಗಿ ಉಳಿದುಕೊಂಡ, ಈ ಕೃತಿಗಳು ಈ ಅವಧಿಯಲ್ಲಿ ಅಚ್ಚಾಗುತ್ತಿರುವುದು ನಿಜವಾಗಿಯೂ ಅಕಾಡೆಮಿಗೆ ಹೆಮ್ಮೆಯ ವಿಷಯವಾಗಿದೆ.

ಈ ಕೃತಿಯನ್ನು ತುಳುವಿನಲ್ಲಿ ಬರೆದು, ಈಗ ಮತ್ತೆ ಪುನಃ ಕನ್ನಡಕ್ಕೆ ಅನುವಾದಗೊಳಿಸಿದ ಡಾ. ವಾಮನ ನಂದಾವರ ಇವರಿಗೆ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಪರವಾಗಿ ಹೃತ್ಪೂರ್ವಕ ಕೃತಜ್ಞತೆಗಳು. ಈ ಪುಸ್ತಕವನ್ನು ಚೆಲುವಾದ ಮುಖ ಪುಟದೊಂದಿಗೆ ಅಚ್ಚು ಮಾಡಿದ ಅರುಣ ಪ್ರಿಂಟರ್ಸ್ ಮಾಲೀಕರಾದ ಶ್ರೀ ಎಚ್. ಪ್ರಸನ್ನಕುಮಾರ್ ಇವರಿಗೆ ಕೂಡ ಕೃತಜ್ಞತೆಗಳು.

ಮಂಗಳೂರು
18-7-2007

ಯಮ್. ಕೆ. ಸೀತಾರಾಮ್ ಕುಲಾಲ್
ಅಧ್ಯಕ್ಷರು



ಕೋಟಿ ಚೆನ್ನಯ

ಸೀನಣ್ಣ ತೋರಿಸಿದ ದಾರಿ

ಅಂದು ಹುಣ್ಣಿಮೆ ದಿನ ತಿಂಗಳು. ಸಂಜೆಯ ಹೊತ್ತು. ಎಲ್ಲೋ ಕದಿನ ಸಿಡಿದ ಸದ್ದು ಕೇಳಿತು. ಆಚೆ ಮನೆಯ ದೂಮಣ್ಣ ಎಲ್ಲೋ ಹೊರಟು ನಿಂತಿದ್ದರು. ನಮ್ಮ ಮನೆಯ ಅಂಗಳದಲ್ಲೇ ನಿಂತು ನಾನು ವಿಚಾರಿಸಿದೆ.

"ಎಲ್ಲಿಂದ ದೂಮಣ್ಣ ಕದಿನ?"

"ಓ! ಅದೋ! ನಿಮಗೆ ಗೊತ್ತಿಲ್ವೇ? ಇಂದು ಬೈದ್ಯೆರ್ಲೆ ಕೋಲ. ಕಂಕನಾಡಿ ಗರೊಡಿ ಜಾತ್ರೆ ಅಲ್ವೇ?"

ದೂಮಣ್ಣ ಸಂಗತಿ ತಿಳಿಸಿದರು.

"ಬೈದ್ಯೆರ್ಲೆ ಕೋಲ, ಗರೊಡಿ ಹಾಗಂದರೆ ಏನು ದೂಮಣ್ಣ?"

ನಾನು ಕೇಳಿದೆ

"ಬೈದ್ಯೆರ್ಲು ಎಂದರೆ ಕೋಟಿ ಚೆನ್ನಯರು. ಗರೊಡಿಯಲ್ಲಿ ಅವರಿಗೆ ಆ ಹೆಸರು. ಅವರನ್ನು ಆರಾಧನೆ ಮಾಡುವ ಸ್ಥಳವೇ ಗರೊಡಿ"

ದೂಮಣ್ಣ ವಿವರಿಸಿ ಹೇಳಿದರು.

ನಾನು ಕೋಟಿ ಚೆನ್ನಯರ ಹೆಸರು ಕೇಳಿದ್ದೆ. ಆದರೆ ಅವರನ್ನು ಹೆಚ್ಚು ಗೊತ್ತಿಲ್ಲ ದೂಮಣ್ಣನಲ್ಲೇ ಕೇಳಿದರೆ ಹೇಗೆ? ಎಂದುಕೊಂಡೆ. ಜಾತ್ರೆಗೂ ಕೋಟಿ ಚೆನ್ನಯರಿಗೂ ಏನು ಸಂಬಂಧ ಎಂದು ತಿಳಿಯುವ ಆಸೆಯೂ ಹುಟ್ಟಿತು.

"ದೂಮಣ್ಣ ನೀವು ಜಾತ್ರೆಗೆ ಹೋಗಿವಿರೇ?"

"ಹೌದು! ನೋಡಿ ಅಲ್ಲಿಗೇ ಹೊರಟದ್ದು. ನೀವು ಬರುವಿರಾ? ಬಂದರೆ ಒಟ್ಟಿಗೆ

ಹೋಗೋಣ"

ದೂಮಣ್ಣ ಅಷ್ಟು ಹೇಳಿದ್ದೇ ತಡ! ನಾನು ಕುಶಿಯಿಂದ ಒಳ ನಡೆದೆ. ಹೊರಟು ಸಿದ್ಧನಾಗಿ ಬಂದೆ.

ದೂಮಣ್ಣ ಮತ್ತು ನಾನು ಜಾತ್ರೆಗೆ ಹೊರಟೆವು. ನಮ್ಮ ಮಾತುಕತೆ ಮುಂದುವರಿಯಿತು. ದಾರಿಯೂ ಸಾಗಿತು.

"ನಿಮಗೆ ಕೋಟಿ ಚೆನ್ನಯರ ಕತೆ ಗೊತ್ತೇ ದೂಮಣ್ಣ?"

"ಏನು ಗೊತ್ತಿಲ್ಲದೆ?"

"ನನಗೆ ಸ್ವಲ್ಪ ಹೇಳುವಿರಾ?"

"ಏನು ಸ್ವಾಮಿ! ತಮಾಷೆ ಮಾಡುತ್ತೀರಾ? ಕೋಟಿ ಚೆನ್ನಯರ ಆಟ, ನಾಟಕ ಸಿನೇಮಾ ಎಲ್ಲ ನೋಡಿದವರು ನೀವು. ನನ್ನನ್ನೇ ಕೇಳುವಿರಲ್ಲ? ಅದಿರಲಿ, ನೀವೇನು ಅವರ ಕತೆ ಬರೆಯುತ್ತೀರಾ? ಪುಸ್ತಕ ಮಾಡುತ್ತೀರಾ?"



"ಹಾಗಲ್ಲ ದೂಮಣ್ಣ, ನಿಮ್ಮಂತಹ ಜನ ಹೇಳಿದರೆ ಮಾತ್ರ ನಾವು ಬರೆಯುತ್ತೇವೆ. ಎಷ್ಟೋ ಸಂಗತಿಗಳು ನಮಗಿಂತ ನಿಮಗೇ ಹೆಚ್ಚು ಗೊತ್ತಿರುತ್ತವೆ. ಈಗ ಗೊತ್ತಿದ್ದಷ್ಟು ಹೇಳಿ"

"ಹಾಗೆ ಸರಿಯಾಗಿ ಹೇಳಲು ನನ್ನಿಂದ ಆಗದು. ನಿಮಗೆ ಕತೆಯಲ್ಲವೇ ಬೇಕಾದ್ದು. ಜನ ನಾನು ಕೊಡುತ್ತೇನೆ."

ಅಷ್ಟರಲ್ಲಿ ನಾವು ಗರೊಡಿಗೆ ಬಂದೆವು. ದೂಮಣ್ಣನ ಜತೆ ನಾನು ಗರೊಡಿಯ ಒಳಗೆ ಹೋದೆ. ಅಲ್ಲಿ ಮೂರು ಚಪ್ಪರಕೊಂಬು ಕಟ್ಟಿದ ವೇಷಗಳು ಸಿದ್ಧವಾಗುತ್ತಿದ್ದವು.

"ನೋಡಿ ಇವರೇ ಪರವರು. ವೇಷ ಕಟ್ಟಿ ಕುಣಿಯುವವರು. ಇನ್ನು ನಿಮಗೆ ಏನೆಲ್ಲ ಬೇಕೋ ಇವರೇ ಹೇಳುತ್ತಾರೆ."

ದೂಮಣ್ಣ ಅವರ ಪರಿಚಯ ಮಾಡಿಕೊಟ್ಟರು. ಸ್ವಲ್ಪ ಹೊತ್ತಿನಲ್ಲೇ ಗರೊಡಿ ಇಳಿಯಲು ಸಿದ್ಧವಾಯಿತು. ಮೂರು ವೇಷಗಳು ಬೆರ್ಮೆರ್ ದೈವದ ಗುಡಿಯ ಮುಂದೆ ನಿಂತುವು. ಅಕ್ಕಪಕ್ಕದಲ್ಲಿ ಹತ್ತು ಸಮಸ್ತ ಮುಖ್ಯಸ್ಥರು ಬಂದು ನಿಂತರು. ಹಿಮ್ಮೇಳ ವಾದ್ಯ ಶುರುವಾಯಿತು. ಹೊರಗೆ ಮತ್ತೆ ಕದಿನಗಳ ಸದ್ದು! ವೇಷ ಹಾಕಿದ ಮೂವರಲ್ಲಿ ಒಬ್ಬರು ಬೀರ ಹೇಳಲು ಪ್ರಾರಂಭಿಸಿದರು. ಸುಮಾರು ಐದು ನಿಮಿಷ ಕಾಲ ಬೆರ್ಮೆರ್ ಸ್ತುತಿ ಸಾಗಿತು. ಆ ಮೇಲೆ ಅಲ್ಲೇ ತುಸು ಹೊತ್ತು ಕುಣಿತ ನಡೆಯಿತು. ಬಳಿಕ ಗರೊಡಿ ಇಳಿದು ಅವರೆಲ್ಲ ಅಂಗಣಕ್ಕೆ, ಗರೊಡಿ ಗದ್ದೆಗೆ ಸುತ್ತು ಹಾಕಿದರು. ಗುಡಿಗಳಿಗೆ ಪ್ರದಕ್ಷಿಣೆ ಬಂದರು. ಹಾಗೆಯೇ ಅಲ್ಲೆಲ್ಲ ಕುಣಿತವೂ ನಡೆಯಿತು. ಪ್ರಧಾನವಾಗಿ ಕೋಟಿ ಚೆನ್ನಯ ಮತ್ತು ಕುಜುಂಬ ಕಾಂಜ ವೇಷಗಳು ರಾತ್ರಿ ಬೆಳಗಾಗುವ ತನಕ ಕುಣಿತ, ಬೀರ, ಹರಕೆ ಸೇವೆ ಆಚರಣೆಗಳಲ್ಲಿ ಪಾಲುಗೊಂಡವು.

ಅಂದು ರಾತ್ರಿಯಡೀ ನಾನು ನೇಮ ನೋಡಿದೆ. ನೇಮದಲ್ಲಿ ಬೆದ್ಯೆರ್ಲೆ ಸಂದಿ ಹೇಳುತ್ತಾರೆ. ಕುಣಿಯುತ್ತಾರೆ. ಬೈದ್ಯೆರ್ಲೆ ಅಗೆಲು ದಿನ ಕೂಡ ಬಹುಪಾಲು ಸಂದಿ ಹೇಳುತ್ತಾರೆ. ಬೀರ, ಸಂದಿ, ಪಾಡ್ದನಗಳಲ್ಲಿ ಅವಳಿ ವೀರರ ಕತೆಯಿದೆ. ಈ ಕತೆಯನ್ನೇ ನಾನಿಲ್ಲಿ ಹೇಳುತ್ತಿರುವುದು.

ಕೇಂಜವ ಹಕ್ಕಿಗಳ ಕತೆ

ಏಳು ಕಡಲು. ಏಳನೆಯ ಕಡಲ ನಡುವೆ ಎಡ ಬಲ ಹುತ್ತಗಳು. ಅವುಗಳ ನಡುವೆ ನಾಗನ ಹುತ್ತ. ಎಲ್ಲರನ್ನೂ ಕಾಯುವ ಬೆರ್ಮೆರ್ ಉದಿಸಿದ ಹುತ್ತ. ಎಡ ಹುತ್ತ ಒಡೆಯಿತು, ಹೆಣ್ಣು ಹಕ್ಕಿ ಉದಿಸಿತು. ಬಲ ಹುತ್ತ ಒಡೆಯಿತು. ಗಂಡು ಹಕ್ಕಿ ಉದಿಸಿತು. ಅವು ಕೇಂಜವ ಹಕ್ಕಿಗಳು. ಗಂಡು ಹೆಣ್ಣು ಹಕ್ಕಿಗಳು. ಅಣ್ಣ ತಂಗಿ ಹಕ್ಕಿಗಳು. ಹಕ್ಕಿಗಳು ಬೆಳೆದುವು. ದೊಡ್ಡವಾದುವು. ಹೆಣ್ಣು ಹಕ್ಕಿಗೆ ಸಂತಾನದ ಸಿರಿಫಲ ಬೇಕೆನಿಸಿತು.


ಅವು ದೇವರ ಅಪ್ಪಣೆ ಪಡೆದುವು. ಗಂಡ ಹೆಂಡತಿ ಆದುವು.

ಹೆಣ್ಣು ಹಕ್ಕಿ ಬಸುರಿ ಆಯಿತು. ಬಸುರಿಗೆ ಏನೋ ಬಯಕೆ. ಬಯಕೆ ತೀರಿಸಲು ಗಂಡು ಹೊರಟಿತು. ಬಡಗು ಗಂಗೆಯ ಹೂವು. ಹೂವಿನಲ್ಲಿ ಸವಿ ಹನಿಯಿದೆ. ಹನಿ ತೆಗೆಯಲು ಹಕ್ಕಿ ಕೊಕ್ಕು ತೂರಿತು. ಪಾಪ! ಏನು ಮಾಡಲಿ. ಕೊಕ್ಕು ಹೂವಿನಲ್ಲೇ ಸಿಕ್ಕಿಕೊಂಡಿತು. ಹಕ್ಕಿ ಹಾರಿ ಬರಲು ಒದ್ದಾಡಿತು.


ಕೇಂಜವ ಹೋದವ ಬರಲಿಲ್ಲ. ಏನು ಕತೆ? ಹೆಣ್ಣಿಗೆ ಭಯವಾಯಿತು. "ನನ್ನ ಕೇಂಜವ ತಿರುಗಿ ಬರಲಿ. ಬಂದರೆ ನಾನಿಡುವ ಮೊದಲ ಮೊಟ್ಟೆ ದೇವರಿಗೆ!" ಎಂದು ಕೇಂಜವ ಹರಕೆ ಹೇಳಿತು. ತುಸು ಹೊತ್ತು ಕಳೆಯಿತು. ಗಂಡು ಕೇಂಜವ ಬಂತು. ಹೆಂಡತಿಗೆ ಹೂವಿನ ಹನಿ ನೀಡಿತು. ಬಸುರಿಯ ಬಯಕೆ ತೀರಿತು. ಸಂತಸ ತಾಳಿತು.

ಜೇವು ಕೇದಗ

ದಿನಗಳು ಕಳೆದವು. ಹೆಣ್ಣು ಕೇಂಜವ ಮೊಟ್ಟೆ ಇಟ್ಟಿತು. ಮೊದಲಿಗೆ ಹೇಳಿದ ಹರಕೆ ನೆನೆಪಾಯಿತು. ಹಕ್ಕಿಗಳು ರೆಕ್ಕೆ ರೆಕ್ಕೆ ಜೋಡಿಸಿ ಮೊಟ್ಟೆ ಒಯ್ದುವು. ಮೇಲೆ ಮಿರಿ ಲೋಕದಲ್ಲಿ ದೇವರಿದ್ದಾರೆ. ಹಕ್ಕಿಗಳು ಸಮುದ್ರದ ಮೇಲೆ ಹಾರಿದುವು. ಹಾರುವಾಗ ರೆಕ್ಕೆಯಿಂದ ತಪ್ಪಿ ಮೊಟ್ಟೆ ಜಾರಿತು. ಸಮುದ್ರ ಪಾಲಾಯಿತು. ಬಿದ್ದ ಮೊಟ್ಟೆ ಲಿಂಬೆಯ ರೂಪವಾಯಿತು. ಕೂವೆತೋಟದ ಪೆಜನಾರ್ ಬ್ರಾಹ್ಮಣ ಸ್ನಾನಕ್ಕೆ ಬಂದನು. ಬೊಗಸೆ ನೀರಲ್ಲಿ ಬ್ರಾಹ್ಮಣನಿಗೆ ಅಪೂರ್ವ ಹಣ್ಣು ಸಿಕ್ಕಿತು. ಆತ ಅದನ್ನು ಮನೆಗೊಯ್ದ. ಹೆಂಡತಿಗೆ ಕೊಟ್ಟ. ಆಕೆ ದೇವರ ಕೋಣೆಯಲ್ಲಿ ತಂದಿಟ್ಟಳು. ಮರುದಿನ ನೋಡಿದರೆ ಮಗು ಅಳುವ ಸದ್ದು. ದೇವರ ಕೋಣೆಯಲ್ಲಿ ಲಿಂಬೆ ಹಣ್ಣು ಇಲ್ಲ. ಹೆಣ್ಣು ಮಗು ಆಡುತ್ತಿದೆ. ಗಂಡ ಹೆಂಡತಿ ಚಕಿತರಾದರು. "ಮಕ್ಕಳಿಲ್ಲದ ನಮಗೆ ದೇವರೇ ಈ ಮಗುವನ್ನು ಕೊಟ್ಟವರು"



ಎಂದು ಸಂತಸಪಟ್ಟರು. ಮಗುವನ್ನು ಎತ್ತಿ ಮುದ್ದಾಡಿದರು.
ಜೇವು ಕೇದಗೆ ಎಂದು ಹೆಸರಿಟ್ಟರು.
ಮುದ್ದಿನಿಂದ ಸಾಕಿ ಸಲಹಿದರು.



ದೇಯಿಯ ಕತೆ.

ಜೇವು ಕೇದಗೆ ದೊಡ್ಡವಳಾದಳು.
ಮೈ ನೆರೆದು ಹೆಣ್ಣಾದಳು. ಮದುವೆಗೆ
ಮುನ್ನ ಹೆಣ್ಣು ಮೈ ನೆರೆಯಕೂಡದು.
ಇದು ಬ್ರಾಹ್ಮಣರ ಆ ಕಾಲದ ಕಟ್ಟಳೆ.
ಮೈ ನೆರೆದರೆ ಆಕೆ ಕುಲದಿಂದ ಹೊರಗೆ.
ಪಾಪ ! ಕೇದಗೆಯ ಕಣ್ಣಿಗೆ ಬಟ್ಟೆ ಕಟ್ಟಿದರು.
ಸಂಕಮಲೆ ಕಾಡಿಗೆ ಬಿಟ್ಟರು. ಕೇದಗೆ ಅಳುತ್ತ
ಅಲೆದಳು. ಏರಾಜೆ ಬರ್ಕೆಯ ಸಾಯನ ಬೈದ್ಯ
ಮೂರ್ತೆಗೆ ಬಂದ. ಯಾರೋ
ಅಳುವ ಸ್ವರ ಕೇಳಿತು.
ನೋಡಿದರೆ ಹೆಣ್ಣು!

"ಅಯ್ಯೋ ಯಾರಪ್ಪ ಈಕೆಯನ್ನು
ಹೀಗೆ ಬಿಟ್ಟವರು?"

ಸಾಯನ ಬೈದ್ಯನಿಗೆ
ಕನಿಕರವಾಯಿತು. ಕಣ್ಣ ಬಟ್ಟೆ
ಕಳಚಿದ. ತನ್ನ ಜತೆ ಕರೆದೊಯ್ದ.
ದೇಯಿ ಎಂದು ಹೆಸರೆತ್ತಿ ಕರೆದ. ತಂಗಿಯ ಹಾಗೆ
ಸಾಕಿ ಸಲಹಿದ. ಮುಂದೆ ದೇಯಿಗೆ ಮದುವೆ ನಡೆಯಿತು.
ದೇಯಿಯ ಗಂಡ ಕಂಗು ಹಿತ್ತಿಲು ಕಾಂತಣ ಬೈದ್ಯ.

ಬೇಟೆಯ ಪರಿಣಾಮ

ತುಳುನಾಡಿನಲ್ಲಿ ಪರ್ಮಲೆ ಬೀಡು ಇತ್ತು. ಬಲ್ಲಾಳ ಅಲ್ಲಿಗೆ ಒಡೆಯ. ಒಮ್ಮೆ ಪರ್ಮಲೆ ಬಲ್ಲಾಳ ಬೇಟೆಗೆ ಹೋದ. ಕಾಡು ಹಂದಿ ಎದ್ದಿತು. ಈಡು ಇಟ್ಟು ಹಂದಿಗೆ ಪಗರಿ ಬಿಟ್ಟ. ಹಂದಿ ಪಗರಿಗೆ ಬಲಿಯಾಯಿತು. ಆಗಲೇ ಬಲ್ಲಾಳನ ಕಾಲಿಗೆ ಒಂದು ಮುಳ್ಳು ತಾಗಿತು. ಅದು ಬಲವಾಗಿ ನಾಟಿತು. ಹಂದಿ ಆಚೆ ಉರುಳಿತು. ಬಲ್ಲಾಳ ಈಚೆ ಹೊರಳಿದ. ಆಳುಗಳು ಮರ ಕಡಿದರು. ದಂಡಿಗೆ ಮಾಡಿದರು. ಬಲ್ಲಾಳನನ್ನು ಬೀಡಿಗೆ ಸಾಗಿಸಿದರು. ಬಡಿಗೆ ಮಾಡಿದರು. ಹಂದಿಯನ್ನೂ ಸಾಗಿಸಿದರು.

ನಂಜು ಮುಳ್ಳು ನಾಟಿತು.



ನಾಟಿದ್ದು ನಂಜು ಮುಳ್ಳು. ಬಲ್ಲಾಳನ ಕಾಲು ಗುಣವಾಗಲಿಲ್ಲ. ಆತ ಹಾಸಿಗೆ ಹಿಡಿದ ದಿನದಿಂದ ದಿನಕ್ಕೆ ಶಕ್ತಿ ಕಳೆದುಕೊಂಡ. ಅಮನ ಬನ್ನಾಯನ ಮದ್ದು ಮಾಡಿದರು. ಆದರೆ ಆ ಮದ್ದು ನಾಟಲಿಲ್ಲ. ನೋವು ತಡೆಯದು. ಬಲ್ಲಾಳ ಬೀಡಿನ ಬೊಮ್ಮಯನನ್ನು ಬರ ಹೇಳಿದ. ಚಾವಡಿ ಸಾಂತಯನಿಗೆ ಹೇಳಿ ಕಳಿಸಿದ.

"ನನ್ನ ಪ್ರಾಣ ಉಳಿಸಲು ಯಾರಿದ್ದಾರೆ? ಇದ್ದರೆ ಬೇಗ ಕರೆಸಿ, ನನ್ನ ಪ್ರಾಣ ಉಳಿಸಿ"

ಬಲ್ಲಾಳ ಗೋಳಿಟ್ಟ.

ದೇಯಿ ಜೀವ ಉಳಿಸಿದ ದೇವಿ

ದೇಯಿ ವೈದ್ಯ ವಿದ್ಯೆ ಕಲಿತವಳು. ಆಕೆಗೆ ಜನ ಹೋಯಿತು. ಆದರೆ ದೇಯಿ ತುಂಬಿದ ಬಸುರಿ. ನಿಂತರೆ ಕಾಲಡಿ ಕಾಣದ ಸ್ಥಿತಿಯವಳು. ನಾಲ್ಕು ಹೆಜ್ಜೆ ನಡೆದು ಬರಲಾರಳು. ಆಕೆಯನ್ನು ಕರೆ ತರಲು ಬಲ್ಲಾಳ ದಂಡಿಗೆ

ಕಳುಹಿಸಿದ.


"ಬಿಲ್ಲವ ಹೆಣ್ಣಿಗೆ ದಂಡಿಗೆಯೇ? ಆಕೆ ದಂಡಿಗೆ ಏರಿ ಬರುವುದೇ? ಅದು ಆಗದ ಕೆಲಸ" ದೇಯಿ ದಂಡಿಗೆಯ ಕೈ ಹಿಡಿದು ಬೀಡಿಗೆ ನಡೆದೇ ಬಂದಳು.

ದೇಯಿ ಬಲ್ಲಾಳನ ಕಾಲು ನೋಡಿದಳು. ಹಳೆಯ ಲೇಪ ಒರೆಸಿ ಬೇರೆ ಹಾಕಿದಳು. ಆಕೆಯ ಮದ್ದು ಬಲ್ಲಾಳನಿಗೆ ಹಿಡಿಸಿತು. ದಿನದಿಂದ ದಿನಕ್ಕೆ ಊತ ಕಡಿಮೆಯಾಯಿತು. ದೇಹದಲ್ಲಿ ಶಕ್ತಿ ತುಂಬಿತು. ಆತ ಗೆಲುವಾಗಿ ಎದ್ದು ನಿಂತ. ನಿಂತು ನಡೆಯಲು ತೊಡಗಿದ. ಹೋಗುವ ಜೀವ ಉಳಿಯಿತು.

ಜೀವ ಉಳಿಸಿದ ದೇಯಿಗೆ ಬಲ್ಲಾಳ ಉಡುಗೊರೆ ನೀಡಿದ.

"ಉಳಿದುವು ಇದ್ದರೆ ನಿನ್ನ ಮಕ್ಕಳಿಗೆ ಕೊಡುವೆ" ಎಂದು ಮಾತು ಕೊಟ್ಟ.

"ಬಲ್ಲಾಳರೇ ನನ್ನ ಕೆಲಸವಾಯಿತು. ನಾನಿನ್ನು ಹೊರಡುತ್ತೇನೆ. ಅಪ್ಪಣೆಯಾಗಲಿ" ದೇಯಿ ಹೊರಟಳು.





ಜಗಳಕ್ಕೆ ನಾಂದಿ

ದೇಯಿಗೆ ನಡೆಯಲು ಕಷ್ಟವಾಯಿತು. ಕಟ್ಟಹುಣಿಯಲ್ಲೇ ಆಕೆಗೆ ಹೆರಿಗೆ ನೋವು ಕಾಣಿಸಿತು. ಅಲ್ಲೇ ಇದ್ದ ತೆಂಗಿನ ಮರಕ್ಕೆ ಒರಗಿ ನಿಂತಳು. ಬಲ್ಲಾಳನ ಮಂತ್ರಿ ಮಲ್ಲಯ್ಯ ಬುದ್ಯಂತ. ಬೀಡಿಗೆ ಬಿಲ್ಲವ ಹೆಣ್ಣು ಬಂದುದು, ಆಕೆಗೆ ಮನ್ನಣೆ ಸಂದುದು ಆತನಿಗೆ ಸರಿ ಕಾಣಿಸಲಿಲ್ಲ. ಅವನಿಗೆ ಹೊಟ್ಟೆ ಕಿಚ್ಚು ಆಯಿತು. ಅಂದು ಆತ ಬೀಡಿಗೆ ಬರುತ್ತಿದ್ದ. ದಾರಿಯಲ್ಲಿ ದೇಯಿ ನಿಂತಿದ್ದಳು.

"ದಾರಿ ಬಿಡದಷ್ಟು ಸೊಕ್ಕೇ ಬಿಲ್ಲವ ಹೆಣ್ಣಿಗೆ!"

ಬುದ್ಯಂತ ಮತ್ಸರ ಕಾರಿಯೇ ಬಿಟ್ಟ.

"ನಾನು ಸೊಕ್ಕಿನಿಂದ ನಿಂತೆನೇ? ಹಾಗಾದರೆ ದೇವರು ನೋಡಲಿ. ಕೂಡದೆ ನಿಂತರೆ ನನ್ನ ಮಕ್ಕಳು ನೋಡಿಯಾರು?"

ದೇಯಿ ಬಹಳಷ್ಟು ನೊಂದುಕೊಂಡಳು. ಬುದ್ಯಂತ ದರ್ಪದಿಂದ ಮುಂದೆ ಸಾಗಿದ. ದೇಯಿಗೆ ಮುಂದೆ ನಡೆಯಲು ಆಗಲಿಲ್ಲ. ಅಲ್ಲೇ ತೆಂಗಿನ ಮರದ ಬುಡದಲ್ಲಿ ಒರಗಿ ಕುಳಿತಳು.

ಅವಳಿ ಮಕ್ಕಳ ಜನನ

ಸುದ್ದಿ ಅರಮನೆಗೆ ತಿಳಿಯಿತು. ಬಲ್ಲಾಳ ಆಕೆಯನ್ನು ಮತ್ತೆ ಬೀಡಿಗೆ ಕರೆಸಿದ. ಹೆರಿಗೆಗೆ ವ್ಯವಸ್ಥೆ ಮಾಡಿಸಿದ. ದೇಯಿ ಹಡೆದಳು. ಅವಳಿ ಮಕ್ಕಳು. ಗಂಡು ಮಕ್ಕಳು. ಮಕ್ಕಳು ಲಕ್ಷಣವಂತರು. ಹೆತ್ತ ಸೂತಕ ಕಳೆಯಿತು. ಅಮೆ ಕಳೆದು ಹದಿನಾರನೆಯ ದಿನ. ಒಂದು ತೊಟ್ಟಿಲು ಕಟ್ಟಿದರು. ಎರಡು ಮಕ್ಕಳನ್ನು ತೂಗಿದರು. ಬಲ್ಲಾಳನೇ ಮಕ್ಕಳಿಗೆ ಹೆಸರಿಟ್ಟ. ಮೊದಲ ಮಗುವನ್ನು ಕೋಟಿ ಎಂದು ಕರೆದ. ಎರಡನೆಯ ಮಗುವನ್ನು ಚೆನ್ನಯ ಎಂದ.

ತಬ್ಬಲಿ ಮಕ್ಕಳು

ಒಂದು ದಿನ ದೇಯಿ ಮಕ್ಕಳನ್ನು ಮೀಯಿಸಿ ಮಲಗಿಸಿದಳು. ತೋಡಿಗೆ ಬಟ್ಟೆ ಒಗೆಯಲು ಹೊರಟಳು. ಬಟ್ಟೆ ಒಗೆಯುತ್ತಿದ್ದಾಗ ಆಕೆಯ ತಲೆಯ ಮೇಲೆ ಏನೋ ಬಿತ್ತು. ಅದು ತೆಂಗಿನ ಸೋಗೆ. ಬಿದ್ದ ಸೋಗೆಯ ಪೆಟ್ಟಿಗೆ ಹಸಿ ಬಾಣಂತಿ ಅಲ್ಲೇ ಕುಸಿದು ಬಿದ್ದಳು. ಮಕ್ಕಳು ತಾಯಿಯನ್ನು ಕಳೆದುಕೊಂಡರು. ತಂದೆ ಮೊದಲೇ ಸತ್ತು ಹೋಗಿದ್ದ. ತಬ್ಬಲಿ ಮಕ್ಕಳನ್ನು ಬಲ್ಲಾಳ ಪ್ರೀತಿಂದ ಸಾಕಿದ. ಉಣಲು ಉಡಲು ಕೊಟ್ಟ. ಯಾವುದಕ್ಕೂ ಕಡಿಮೆ ಮಾಡಲಿಲ್ಲ. ಬೀಡಿನಲ್ಲಿ ಬಿಲ್ಲವ ಸಂತಾನದ ಮೊಳಕೆ. ಏನಿದು ಹೋಗುವ ಕಾಲ!"

ಬುದ್ಯಂತನ ಹೊಟ್ಟೆ ಉರಿ ಹೆಚ್ಚಾಯಿತು.

ಬಲ್ಲಾಳ ಮಕ್ಕಳ ಮಾವನನ್ನು ಕರೆಸಿದ. ಮಾವ ಸಾಯನ ಬಂದ. ಕುಲದ ಕುಡಿಗಳನ್ನು ಕಂಡ. ಅಳಿಯಂದಿರನ್ನು ತನ್ನ ಏರಾಜೆಗೆ ಬರ್ಕೆಗೆ ಕರೆದೊಯ್ದ. ಬಲ್ಲಾಳ ಮಕ್ಕಳನ್ನು ಮರೆತು ಹಾಕಲಿಲ್ಲ. ಕಾಲ ಕಾಲಕ್ಕೆ ಬೇಕಾದ್ದನ್ನು ಕಳಿಸಿದನು. ಉಣಲು, ತಿನಲು, ಉಡಲು, ತೊಡಲು, ಕೊಟ್ಟ, ಕೈಗೆ ಬಳೆ, ಕಾಲಿಗೆ ಕಡಗ, ಕಿವಿಗೆ ಕುಂಡಲ ಮಾಡಿಸಿದ.



ಬಾಲ್ಯದ ಆಟಗಳು

ಕೋಟಿ ಚೆನ್ನಯರು ಮನೆಯ ಅಂಗಳದಲ್ಲಿ ಓಡಾಡುವರು. ಹೊರಗೆ ಮಕ್ಕಳ ಜತೆ ಕೂಡಿ ಆಡುವರು. ಮುದ್ದು ಕರುಗಳನ್ನು ಮೇಯಿಸುವರು. ಗೋವಳರೊಡನೆ ಕೂಡುವರು. ಪಲ್ಲೆ ಕಾಯಿ, ಕಡೆಂಜಿಕಾಯಿ, ಬುಗರಿ, ಕುಟ್ಟಿ ದೊಣ್ಣೆ, ಚೆಂಡು ಆಟಗಳನ್ನು ಆಡುವರು. ನೆರೆಕರೆಯವರಿಗೆ ಅವರೆಂದರೆ ಅಚ್ಚುಮೆಚ್ಚು. ಆದರೆ ಬುದ್ಯಂತನ ಪ್ರೀತಿಗೆ ಮಾತ್ರ ಅವರು ದೂರ. ಅವನ ಮಕ್ಕಳೂ ಉಳಿದವರ ಕೂಡೆ ಆಡುವುದಿಲ್ಲ. ಅವರದು ಬೇರೆಯೇ ಕಳ. ಬೇರೆಯೇ ಕೂಟ. ಆದರೆ ಕೋಟಿ ಚೆನ್ನಯರಿಗೆ ಅವರ ಜತೆ ಆಡುವ ಆಸೆ. ಪಂತ ಕಟ್ಟಿ ಸೋಲಿಸುವ ಚಪಲ. ಅಂದು ಬುದ್ಯಂತನ ಮಕ್ಕಳು ಬಯಲಿಗೆ ಬಂದರು, ಕೋಟಿ ಚೆನ್ನಯರು ಅವರ ಕೈಯಲ್ಲಿ ಚೆಂಡನ್ನು ಕಂಡರು. ಅವರೊಡನೆ ಆಡಲು ಹೋದರು. ಆದರೆ ಅರಸು ಮಕ್ಕಳ ಜತೆ, ಮಂತ್ರಿ ಮಕ್ಕಳ ಜತೆ ಇತರ ಮಕ್ಕಳು ಕೂಡಿ ಆಡುವ ಕಾಲ ಅದಾಗಿರಲಿಲ್ಲ.

ಆಟದಿಂದ ಜಗಳಕ್ಕೆ

"ಗದ್ದೆಗೆ ಚೆಂಡು ಹಾಕಿ. ನಾವೂ ನಿಮ್ಮ ಜತೆ ಆಡಲು ಬರುತ್ತೇವೆ" ಎಂದರು ಬಿಲ್ಲವರ ಮಕ್ಕಳು.

"ಚೆಂಡು ಹಾಕಲು ಕಳದ ಬಾಡಿಗೆ ಕೊಡಬೇಕು"

ಎಂದರು ಮಂತ್ರಿ ಮಕ್ಕಳು. ಚೆನ್ನಯ ಈ ಮಾತನ್ನು ಸಹಿಸಲಿಲ್ಲ.

"ಬಾಡಿಗೆ ಕೊಡಬೇಕೇ?"

ಎಂದು ಚೆಂಡು ಕಸಿದುಕೊಂಡ. ಅವರನ್ನು ಸ್ಪರ್ಧೆಗೆ ಕರೆದ. ಆಟವಾಡಿದಾಗ ಪಂತದಲ್ಲಿ ಅವರು ಸೋತರು. ಇವರು ಗೆದ್ದರು. ಮಾತಿಗೆ ಮಾತು ಬೆಳೆಯಿತು. ಮಂತ್ರಿ ಮಕ್ಕಳು ಜಗಳವಾಡಿ ಪೆಟ್ಟು ತಿಂದರು. ಮನೆಗೆ ಹೋಗಿ ಅಪ್ಪನಲ್ಲಿ ದೂರು ಕೊಟ್ಟರು.

ಬುದ್ಯಂತನಿಗೆ ಸಿಟ್ಟು ನೆತ್ತಿಗೇರಿತು. ಮರುದಿನ ಆತ ಆಟದ ಕಳಕ್ಕೆ ಬಂದ. ಕೋಟಿ ಚೆನ್ನಯರಿಂದ ಚೆಂಡನ್ನು ಎಳೆದುಕೊಂಡ.

"ಏನು ಬಿಲ್ಲವರ ಮಕ್ಕಳೇ ನಿಮಗೆ ಅನ್ನದ ಮದವೇ, ನೆತ್ತರ ಸೊಕ್ಕೇ?" ಬುದ್ಯಂತ ಕಿಡಿಕಾರಿದ. ಚೆಂಡನ್ನು ಒಯ್ದು ಮನೆಯ ಅಟ್ಟದಲ್ಲಿಟ್ಟ.



"ಮಂತ್ರಿಗಳೇ ಚೆಂಡನ್ನು ಅಟ್ಟದಲ್ಲಿ ಜೋಪಾನವಾಗಿಡಿ. ಇಂದು ಎಳೆಯ ಕೈಗಳಿಂದ ಕಿತ್ತುಕೊಂಡಿರಿ. ನಾಳೆ ಬೆಳೆದ ಕೈಗಳಿಂದ ಮರಳಿ ಪಡೆದೇವು"

ಕೋಟಿ ಚೆನ್ನಯರು ಭಾಷೆ ಹಾಕಿದರು.

ಕಂಬಳ ಗದ್ದೆ ಬೇಸಾಯ

ಭಾಷೆ ಹಾಕಿದ ಕೋಟಿ ಚೆನ್ನಯರು ಮನೆಗೆ ಬಂದರು. ಮಾವನನ್ನು ಪರ್ಮಲೆ ಬೀಡಿಗೆ ಕಳುಹಿಸಿದರು. ಸಾಯನ ಪರ್ಮಲೆ ಬೀಡಿಗೆ ನಡೆದ. ಬಲ್ಲಾಳ ಮಕ್ಕಳ ಯೋಗಕ್ಷೇಮ ವಿಚಾರಿಸಿದ. ಕೋಟಿ ಚೆನ್ನಯರು ಈಗ ಮಕ್ಕಳಲ್ಲ. ಬಲಿತ ಬಂಟರು ಎಂದು ಬಲ್ಲಾಳನಿಗೆ ತಿಳಿದಿದೆ.

"ಅನಿಲಜೆ ಬಯಲಿನ ಮೇಲಿನ ಕಂಬಳಗದ್ದೆ ಬುದ್ಯಂತನದು. ಕೆಳಗೆ ಇರುವ ಕೋಡಿ ಕಂಬಳಗದ್ದೆ ಬಂಟರಿಗೆ ಕೊಟ್ಟಿದ್ದೇನೆ. ಬೇಸಾಯ ಮಾಡಿಕೊಂಡಿರಲಿ" ಎಂದ ಬಳ್ಳಾಲ.

ಬಂಟರು ಅನಿಲಜೆ ಬಯಲಲ್ಲಿ ಬೇಸಾಯಕ್ಕೆ ತೊಡಗಿದರು. ಸಂಕಮಲೆ ಕಾಡಿನಲ್ಲಿ ಮೂರ್ತೆಯ ಕೆಲಸವನ್ನು ಮಾಡತೊಡಗಿದರು. ಏನಿದ್ದರೂ ಬುದ್ಯಂತ ಅವರಿಗೆ ಕೇಡನ್ನೇ ಬಗೆಯುತ್ತಿದ್ದ. ಅವರ ಉನ್ನತಿಯನ್ನು ಕಂಡು ಕರುಬುತ್ತಿದ್ದ.



ಬಲ್ಯಾಯನ ಬಲಿಮೆ

ಸುಗ್ಗಿ ಬೇಸಾಯದ ಕಾಲ. ಬುದ್ಯಂತ ಕಂಬಳಗದ್ದೆಗೆ ದಿನ ಕೇಳಲು ಬಲ್ಯಾಯನ ಬಳಿ ಹೋದ. ಈ ವಿಷಯ ಬಂಟರಿಗೂ ತಿಳಿಯಿತು.

"ತಮ್ಮ ಗದ್ದೆಗೂ ದಿನ ಕೇಳಿ ಬನ್ನಿ ಮಂತ್ರಿಗಳೇ"

ಬಂಟರು ಬುದ್ಯಂತನಲ್ಲಿ ಕೇಳಿಕೊಂಡರು. ದಿನ ಕೇಳಿದಾಗ ಎರಡು ಕಂಬಳಗಳಿಗೂ ಒಂದೇ ದಿನ ಕೂಡಿ ಬಂತು. ಆದರೆ ಬುದ್ಯಂತ ಮಾತ್ರ ಅದನ್ನು ಬದಲಿಸಿ ಹೇಳಿದ.

"ಬರುವ ಮಂಗಳವಾರ ನಮ್ಮ ಗದ್ದೆಗೆ ದಿನ. ಮೇಲಿನ ಮಂಗಳವಾರ ಬಂಟರ ಗದ್ದೆಗೆ ದಿನ. " ಚೆನ್ನಯನು ಇದನ್ನು ಒಪ್ಪಲಿಲ್ಲ.

"ಬುದ್ಯಂತನ ಕಂಬಳಗದ್ದೆ ಗೋರಿದ ದಿನವೇ ನಮ್ಮದೂ ಗೋರಬೇಕು"

ಎಂದು ತೀರ್ಮಾನಿಸಿದ.

"ನಾಲ್ಕು ಜತೆ ಎತ್ತು ಇದ್ದವರು ಎರಡು ಜತೆ ಬುದ್ಯಂತನಿಗೆ ಎರಡು ಜತೆ ನಮಗೆ ಕಳುಹಿಸಿ" ಎಂದು ಬಂಟರು ಊರಿಡೀ ತಿರುಗಿ ಹೇಳಿಕೊಂಡು ಬಂದರು.

ಸ್ಪರ್ಧೆಯ ಕಂಬಳ

ಕಂಬಳ ಗೋರುವ ದಿನ ಬುದ್ಯಂತನ ಕಂಬಳಕ್ಕಿಂತ ಮೊದಲೇ ಬಂಟರು ಕಂಬಳ ಗೋರಿದರು. ಅವನ ಗದ್ದೆ ಉತ್ತು ಇನ್ನೂ ಮುಗಿದಿಲ್ಲ. ಬಂಟರು ತಮ್ಮ ಗದ್ದೆಯಿಂದ ಎತ್ತು ಮತ್ತು ಆಳುಗಳನ್ನು ಅಲ್ಲಿಗೆ ಕಳುಹಿಸಿದರು. ಬುದ್ಯಂತ ಇದರಿಂದ ಸಿಟ್ಟಿಗೆದ್ದು ಎತ್ತು ಮತ್ತು ಆಳುಗಳನ್ನು ಬಡಿದು ಅಟ್ಟಿದ. ಮಂತ್ರಿಯ ಗದ್ದೆಗೆ ದಂಡಿಗೆಯಲ್ಲಿ ಬಿತ್ತಲು ಬೀಜ ಬಂತು. ಬಂಟರು ಕುಕ್ಕೆಗಳಲ್ಲಿ ತಂದು ಬೀಜ ಬಿತ್ತಿದರು. ಬಿತ್ತಿ ಆದ ಬಳಿಕ ಖಾಲಿ ಕುಕ್ಕೆಗಳನ್ನು ತಲೆಗೆ ಕವುಚಿ ಹಾಕಿ ನಡೆದರು. ಬುದ್ಯಂತನ ದಂಡಿಗೆಗೆ ಇದಿರಾಗಿ ಬಂದರು. ಎಂತಹ ಅಪಶಕುನ ಇದು? ಎಂದ ಇದನ್ನು ನೋಡಿದ ಬುದ್ಯಂತ.

"ಏನು ಮಂತ್ರಿಗಳೇ ದಂಡಿಗೆಯಲ್ಲಿ ಬೀಜ ತರುವ ಸುದ್ದಿ ನಮಗೆ ತಿಳಿಯದೆ ಹೋಯಿತಲ್ಲ. ನೀವು ಮೊದಲೇ ಜನ ಇಟ್ಟು ತಿಳಿಸಲಿಲ್ಲವೇಕೆ?"

ಚೆನ್ನಯ ಹೇಳಿದ.

ಅನಿಲಜೆ ಬಯಲಲ್ಲಿ ಕಂಬಳಗೋರುವ ಹೊತ್ತು, ಬಂಟರಿಗೂ ಬುದ್ಯಂತನಿಗೂ ಮಾತಿಗೆ ಮಾತು ಬೆಳೆಯಿತು.

ಬಿತ್ತಿದ ಮೂರನೆಯ ದಿನ ಅಮೆ ನೀರು ಕಳೆಯಬೇಕು. ಏಳನೇ ಸುಳಿ ನೀರು ಕಟ್ಟಬೇಕು. ಮೊಳಕೆಯ ಸಿರಿಯನ್ನು ನೊಡಬೇಕು. ನೀರನ್ನು ಆರಿಸಬೇಕು. ಆದರೆ ಗದ್ದೆ ಹುಣಿಗೆ ಹೋದರೆ ನಂಜಿನ ಬುದ್ಯಂತ ಇದ್ದಾನೆ.

"ಏನು ಮಾಡೋಣ ತಮ್ಮಾ"

ಎಂದ ಕೋಟಿ.

"ನೀನು ಹೋದರೆ ಮಕ್ಕಳಾಟಿಕೆ ನಡೆದೀತು. ಹೆಚ್ಚು ಕಡಿಮೆ ಆದೀತು. ನಾನು ಹೋಗಿ ಬರುತ್ತೇನೆ. ನೀನು ಸಂಕಮಲೆಗೆ ಮೂರ್ತೆ ಕೆಲಸಕ್ಕೆ ಹೋಗು"

ಎಂದ ಚೆನ್ನಯನಿಗೆ ಅಣ್ಣ ಕೋಟಿ.

ಅಂದು ನಡೆದದ್ದು ಏನು?

ಚೆನ್ನಯ ಮೂರ್ತೆ ಕೆಲಸಕ್ಕೆ ನಡೆದ. ಕೋಟಿ ಕಂಬಳಗದ್ದೆಗೆ ಹೊರಟ. ಆದರೆ ನೋಡುವುದೇನು? ಬುದ್ಯಂತನ ಗದ್ದೆಯ ನೀರು ಬಂಟರಗದ್ದೆಗೆ ಬೀಳುತ್ತಿತ್ತು. ಜೋರಾಗಿ ಬಿದ್ದು ಮೊಳಕೆ ಕೊಚ್ಚಿ ಹೋಗುತ್ತಿತ್ತು. ಇದನ್ನು ಕೋಟಿ ನೋಡಿದ.

"ನಮ್ಮ ಮೇಲಿನ ಹಗೆಯನ್ನು ಬೆಳೆಯಲ್ಲಿ ತೋರಿಸಬೇಡಿ ಬುದ್ಯಂತ"

ಎಂದು ನೀರಿನ ಕಡಿಯನ್ನು ಕಟ್ಟಿದ. ಕಟ್ಟಿದ ಕಡಿಯನ್ನು ಬುದ್ಯಂತ ಕಾಲಲ್ಲಿ ಎಡವಿದ.

ಕೋಟಿ ಕಾಲಲ್ಲಿ ಕಟ್ಟಿದ, ಬುದ್ಯಂತ ಕೈಯಲ್ಲಿ ದೂಡಿದ.

"ಮಂತ್ರಿಗಳೇ ನೀವು ಅನ್ಯಾಯ ಮಾಡಿದಿರಿ. ಇಲ್ಲಿಗೆ ನಾನು ಬರುವ ಬದಲು ನನ್ನ ತಮ್ಮ ಬರಬೇಕಿತ್ತು. ಆಗುವುದು ಆಗಿ ಹೋಗುತ್ತಿತ್ತು."

ಕೋಟಿ ಕೋಪಿಸಿಕೊಂಡು ಹೇಳಿದ.

ಸುರಿಯಕ್ಕೆ ಕೈ ಹೋಯಿತು.

"ನಿನ್ನ ತಮ್ಮ ಯಾರು? ಆತನನ್ನು ನಾನು ನೋಡಿಲ್ಲವೇ? ಕೇಳಿಲ್ಲವೇ? ನಿನ್ನ ತಮ್ಮ ಯಾವ ಗುತ್ತಿನ ಗಡಿ ಹಿಡಿದವ? ಆತ ನವಿಲ ನಾಟ್ಯ ಆಡಿದವನೇ? ಜಿಂಕೆಯ ಜಿಗಿತ ನೆಗೆದವನೇ? ಕಡಿದ ಕಂಗಿನ ಆಚೆ ಹಾರಿದವನೇ? ನಿನ್ನ ತಮ್ಮನನ್ನು ನಾನು ತಿಳಿಯದವನೇ? ಅಟ್ಟೆ ಕಾಲಿನವ, ಸೊಟ್ಟ ಕೈಯವ, ಕೊಮ್ಮೆ

ಹೊಟ್ಟೆಯವ, ಕೊಂಕು ಹಲ್ಲಿನವ ಕುಪುಳು ಕಣ್ಣಿನವ"
ಎಂದು ಬಗೆ ಬಗೆಯಾಗಿ ಜರೆದ.

ಇದು ಚೆನ್ನಯನಿಗೆ ಕೇಳಿಸಿತು. ಅಣ್ಣನಿಗೂ ಬುದ್ಯಂತನಿಗೂ ಏನೋ ಮಾತುಕತೆ ನಡೆಯುತ್ತಿದೆ ಎಂದು ಕೂಡಲೇ ಅಲ್ಲಿಂದ ಮನೆಗೆ ನಡೆದ. ಎರಡು ಸುರಿಯಗಳನ್ನು ಹರಿತ ಮಾಡಿದ.

ಒಂದನ್ನು ಹೆಗಲಲ್ಲಿಟ್ಟ. ಇನ್ನೊಂದನ್ನು ಬಗಲಲ್ಲಿಟ್ಟ. ಕಂಬಳದ ಕಟ್ಟ ಹುಣಿಗೆ ಧಾವಿಸಿ ಬಂದ. ಚೆನ್ನಯ ಬರುವುದನ್ನು ಬುದ್ಯಂತ ದೂರದಿಂದ ನೋಡಿದ. ಅಲ್ಲಿಂದಲೇ ಓಡಿದ.

"ಅಣ್ಣಾ ಏನು ನಡೆಯಿತು."

ಚೆನ್ನಯ ಕೇಳಿದ.

ಕೋಟಿ ನಡೆದ ಸಂಗತಿ ತಿಳಿಸಿದ. ಚೆನ್ನಯ ಅಲ್ಲಿಂದಲೇ ಒಂದು ನೆಗೆತ ಜಿಗಿತ. ಬುದ್ಯಂತನನ್ನು ಬೆನ್ನಟ್ಟಿದ . ಬುದ್ಯಂತ ಓಡತೊಡಗಿದ. ಆದರೆ ಒಂದೆಡೆ ಎಡವಿ ಬಿದ್ದ. ಬಿದ್ದಲ್ಲೇ ಚೆನ್ನಯ ಎದೆಗೆ ಸುರಿಯದಲ್ಲಿ ಕುತ್ತಿದ. ಕುತ್ತಿ ಕೆಡಹಿದ.

ಬುದ್ಯಂತ ಕಾಯ ಬಿಟ್ಟು ಕೈಲಾಸಕ್ಕೆ ಸಂದ. ಅಣ್ಣ ತಮ್ಮಂದಿರು ಅವನ ದೇಹವನ್ನು ನೀರು ಹೋಗುವ ಕಡಿಗೆ ಇಟ್ಟರು. ಮಣ್ಣು ಮೆತ್ತಿದರು. ಕೇಡು ಬಗೆದವನ ಮೇಲೆ ಸೇಡು ತೀರಿಸಿದರು. ಅಲ್ಲಿಂದ ನೇರ ಬುದ್ಯಂತನ ಮನೆಗೆ ನಡೆದರು.

ಭಾಷೆ ಈಡೇರಿತು.

ಬಾರದ ಬಂಟರನ್ನು ಮಂತ್ರಿಯ ಹೆಂಡತಿ ಅರಸಕ್ಕೆ ನೋಡಿದಳು.

"ಬಂದಿರೆ ಬಂಟರೆ. ಆಸರಿಗೆ ಹಾಲು ಕುಡಿದು ಹೋಗಿ" ಎಂದಳು.

"ನಿಮ್ಮ ಯಜಮಾನರು ಪದ್ಮ ಕಟ್ಟೆಯಲ್ಲಿ ಇದ್ದಾರೆ. ಆಸರಿಗೆ ಹಾಲು ತರಲು ಹೇಳಿದ್ದಾರೆ. ಕೊಂಡು ಹೋಗಿ" ಎಂದರು ಬಂಟರು.

ಅರಸಕ್ಕೆಗೆ ಧೈರ್ಯ ತಪ್ಪಿತು.

"ಉಳಿಸಿದಿರೇ ಮಕ್ಕಳೇ ಅಳಿಸಿದಿರೆ ?"

ಎನ್ನುತ್ತಾ ಅರಸಕ್ಕೆ ಬಯಲಿಗೆ ಓಡಿದಳು. ಬಂಟರು ಅಟ್ಟವೇರಿದರು. ಬುದ್ಯಂತ ಅಡಗಿಸಿಟ್ಟಿದ್ದ ಚೆಂಡನ್ನು ತೆಗೆದರು. ಎತ್ತಿ, ಆಡುತ್ತ ಮನೆಗೆ ಒಯ್ದರು.

ಊರು ಹಗೆಯಾಯಿತು, ನೀರು ನಂಜಾಯಿತು

ಅಣ್ಣ ತಮ್ಮಂದಿರು ಬುದ್ಯಂತನ ಕೊಲೆ ನಡೆಸಿದರು. ಸುದ್ದಿ ಗಾಳಿಯಂತೆ ಹರಡಿತು. ಬಲ್ಲಾಳನಿಗೆ ದೂರು ಹೋಯಿತು.

"ನಾನು ಸಾಕಿದ ಮಕ್ಕಳು ನನಗೇ ಎದುರು ನಿಂತರಲ್ಲ! ಅವರನ್ನು ವಿಚಾರಿಸಿ ಶಿಕ್ಷೆ ವಿಧಿಸಲೇಬೇಕು"

ಬಲ್ಲಾಳ ಜನ ಕಳುಹಿಸಿದ. ಆಗ ಬಂಟರೇ ಬೀಡಿಗೆ ಬಂದರು.

"ನಾವು ಬುದ್ಯಂತನನ್ನು ಕೊಂದೆವು" ಎಂದರು.

"ನನ್ನ ಉಪ್ಪನ್ನ ಉಂಡವರು ನೀವು. ನನಗೇ ಇದಿರು ನಿಂತಿರೇ?"

ಎಂದು ಬಲ್ಲಾಳ ಕೆರಳಿ ಕೆಂಡವಾದ.

ನಮ್ಮನ್ನು ಪರರಾಜ್ಯಕ್ಕೆ ಕೊಟ್ಟು ಕಳುಹಿಸಿ. ನಮ್ಮ ತಾಯಿಗೆ ನೀವು ಕೊಟ್ಟ ಮಾತು ಇದೆ. ಇಂದು ಅದನ್ನು ನಡೆಸಿಕೊಡಿ"

ಬಂಟರು ತಮ್ಮ ತಾಯಿಗೆ ಕೊಟ್ಟಿದ್ದ ಮಾತುಗಳನ್ನು ನೆನಪಿಸಿದರು.

ಬೀಡಿಗೆ ಧಿಕ್ಕಾರ

"ನನ್ನಿಂದ ಬಾಕಿ ಇದ್ದರೆ ಕೇಳಿಕೊಳ್ಳಿ. ಕೊಡುತ್ತೇನೆ"

"ಮುನ್ನೂರು ಮುಡಿ ಬೆಳೆಯುವ ಗದ್ದೆಯಿದೆ. ಅದನ್ನು ಕೊಡಿ"

"ಅದು ಸರಕಾರದ ತೀರ್ವೆಗೆ ಬೇಕು. ಅದನ್ನು ಬಿಟ್ಟು ಬೇರೆ ಕೇಳಿ"

"ಪದ್ಮಕಟ್ಟೆಯ ಗೆಂದ ತಾಳೆ"

"ಅದು ಅರಮನೆಯ ಖರ್ಚಿಗೆ ಬೇಕು ಅದನ್ನು ಬಿಟ್ಟು ಬೇರೆ ಕೇಳಿ"

"ಕರೆದಷ್ಟು ಹಾಲು ಕೊಡುವ ಹಟ್ಟಿಯ ಸರಳೆಮ್ಮ ಕೊಡಿ ಸಾಕು" ಎಂದ ಚೆನ್ನಯ.

"ಏನು ಬಂಟರೇ ಹಟ್ಟಿಯ ಸರಳೆಮ್ಮೆ ಕೇಳಿದಿರಿ. ಇನ್ನು ನನ್ನ ಅಬ್ಬೆಯರನ್ನು ಬಿಡುವಿರೇ? ನಿಮಗೆ ಸಲುಗೆ ಹೆಚ್ಚಾಯಿತು"

ಬಲ್ಲಾಳನ ಮಾತು ಕೇಳಿ ಬಂಟರಿಗೆ ಉಗ್ರ ಏರಿತು. ಈ ಊರಲ್ಲೇ ನಿಲ್ಲಬಾರದು ಎಂದುಕೊಂಡರು.

"ಬಲ್ಲಾಳರೇ ನಮ್ಮ ಮಾತಿಗೆ ಆರು ತಿಂಗಳ ಗಡು"

ಬಂಟರು ಚಾವಡಿಗೆ ನಡೆದರು. ಗೋದಿಗೆಯ ಕಂಬಕ್ಕೆ ಗುರುತಿಟ್ಟು ಬೀಡು ಇಳಿದು ಸರಸರನೇ ನಡೆದು ಹೋದರು.

ಸುಕಂದ ದೇರೆ

ಪರ್ಮಲೆ ಬೀಡು ತೊರೆದು ಬಂಟರು ಹೋದರು. ಪಂಜದ ಗಡಿ ಸೇರಿದರು. ಗಡಿಯಲ್ಲಿ ಸುಂಕದ ದೇರೆ ಅವರನ್ನು ತಡೆದ.

"ಸುಂಕ ಕೊಡಿರಿ ಮುಂದೆ ನಡೆಯಿರಿ"

"ಏನಯ್ಯಾ! ತಲೆಯ ಹೊರೆ, ಬೆನ್ನ ಗಂಟು ನೋಡಿ ಸುಂಕ ಕೇಳಿದೆಯಾ?" ಚೆನ್ನಯನಿಗೆ ಸಿಟ್ಟು ತಡೆಯಲಾರದೆ ಕೇಳಿದ.

"ಹಿಡಿದ ಸುರಿಯದ ಸುಂಕ ನೀಡಿ"

"ಭೂಮಿಯಲ್ಲಿ ಹುಟ್ಟಿದವ ಇದುವರೆಗೆ ನಮ್ಮಲ್ಲಿ ಸುರಿಯಗಳಿಗೆ ಸುಂಕ ಕೇಳಿಲ್ಲ. ನಿನಗೆ ಸುಂಕ ಕೊಡಬೇಕೆ? ಕೊಡುತ್ತೇವೆ"

ದೇರೆಯನ್ನು ಸುಂಕದ ಕಟ್ಟೆಯಿಂದ ಕೆಳಗೆ ಎಳೆದರು.

"ಇನ್ನು ಮುಂದೆ ಈ ದಾರಿಯಲ್ಲಿ ಹೋಗುವವರಿಗೆ ಸುಂಕ ಬೇಡ"

ಎಂದು ಸುರಿಯಗಳ ಮೊನೆ ತೋರಿಸಿದರು. ಆಗಲೇ ದೇರೆ ಅಲ್ಲಿಂದ ಡೇರೆ ಕಿತ್ತ"



ನೀರಿನ ಕಟ್ಟೆ



ಸುಂಕದ ಕಟ್ಟೆಯನ್ನು ಕಳೆದು ಬಂಟರು ಮುಂದೆ ನಡೆದರು. ನಡೆದು ನಡೆದು ಬಾಯಾರಿದರು. ನೀರ ಕಟ್ಟೆಗೆ ಹೋದರು. ನೀರು ಕೊಡುವ ಕಟ್ಟೆಯ ಬ್ರಾಹ್ಮಣ ಇವರನ್ನು ನೋಡಿ ಜಾತಿ ಕೇಳಿದ. ಬಿಲ್ಲವರು ಎಂದು ತಿಳಿದಾಗ ದೂರ ಹೋಗಲು ಹೇಳಿದ. ಬಂಟರು ಸುರಿಯ ತೋರಿಸಿದರು. ಸಿರಿಗಿಂಡಿ ಹಿಡಿದ ಬ್ರಾಹ್ಮಣನ ಕೈ ಕಾಲು ನಡುಗಿತು. ಸುರಿಯಗಳ ಮೊನೆಗಳಿಗೆ ನೀರೆರೆಯಲು ಹೇಳಿದರು. ಬ್ರಾಹ್ಮಣ ನೀರನ್ನು ಸುರಿಯಗಳ ಮೇಲೆ ಸುರಿದ. ಬಂಟರು ಸುರಿಯಗಳ ಮೊನೆಗಳನ್ನು ಬಾಯಿಗಿಟ್ಟರು. ತೊಟ್ಟು ನೀರೂ ಚೆಲ್ಲದಂತೆ ಕುಡಿದರು. ಬಾಯಾರಿಕೆ ನೀಗಿಸಿ ಬಂಟರು ಮುಂದೆ ನಡೆದರು.

ಸವಾಲಿಗೆ ಸವಾಲು

ಬಂಟರು ಪಂಜದ ಊರಿನ ಕಾಡು ಬಿಟ್ಟರು, ಪದವಿಗೆ ಬಂದರು. ಹೋಗುವ ರಭಸಕ್ಕೆ ಗುಂಡು ಕಲ್ಲು ಹುಡಿಯಾದುವು. ಹುಲ್ಲು ಪೊದೆ ಆಕಾಶಕ್ಕೆ ಹಾರಿತು. ಅಡ್ಡ ಹಾದ ಬೇರು ತುಂಡಾಯಿತು. ಗಬ್ಬದ ದನ ಕರು ಹಾಕಿತು. ಹೀಗೆ ಸಾಗುತ್ತಿರಲು ತಮ್ಮ ಅಣ್ಣನನ್ನು ಕರೆದು ಕೈ ತೋರಿಸಿ ಹೇಳುತ್ತಾನೆ.

"ನೋಡಣ್ಣ ಗೋಳಿಯ ನೆರಳಲ್ಲಿ ಗಾಳಿಯ ಬರವಿಗೆ ಗೋವಳರು ಬುಗರಿಯ ಕಳ ಮಾಡಿ ಆಡುತ್ತಿದ್ದಾರೆ. ಅವರ ಕುಟ್ಟಿಯ ಕೂಟ, ಆಟದ ಕೂಗು ಆರು ಗಾವುದ ದೂರ ಕೇಳುತ್ತಿದೆ. ಅಣ್ಣಾ ಅವರಲ್ಲಿ

ನಮಗೊಂದು ವಿನೋದವಾಡಬೇಕು. ತಮಾಷೆ ನೋಡಬೇಕು. ಅವರ ಆಟ ತಪ್ಪಿಸಬೇಕು. ಅಣಕ ಆಡಬೇಕು"

"ಆಟವಾಡುವ ಮಕ್ಕಳ ಹಗೆ ನಮಗೆ ಬೇಡ ತಮ್ಮಾ"

ಚೆನ್ನಯನ ಮಾತಿಗೆ ಕೋಟಿ ಹೇಳಿದ.

ಆದರೆ ಚೆನ್ನಯ ಹಟ ಬಿಡಲಿಲ್ಲ. ಗೋವಳರ ಬಳಿಗೆ ನಡೆದು. ಕೇಳಿಯೇ ಬಿಟ್ಟ.

"ನೋಡಿ ಗೋವಳರೇ ನೀವು ಆಟದಲ್ಲಿದ್ದೀರಿ. ನಿಮ್ಮ ಹಿಂಡಿನಲ್ಲಿ ಏನಾಗಿದೆ ಗೊತ್ತೇ ನಿಮಗೆ? ನೋಡಿ ಗೋಣ ಕರು ಹಾಕಿದೆ. ಮೂಸಿ ನೋಡಿ ಮುದ್ದಾಡುತ್ತಿದೆ."

ಇದನ್ನು ಕೇಳಿದ ಗೋವಳರು ಎದುರಿಗೆ ಎದುರುತ್ತರ ಕೊಟ್ಟರು.

"ನೋಡಿ ಬಂಟರೆ ನೀವು ಪಡು ದಿಕ್ಕಿನಿಂದ ಬಂದವರು. ತಿರುಗಿ ನೋಡಿ. ಏಳು ಕಡಲಿಗೆ ಬೆಂಕಿ ಬಿದ್ದಿದೆ. ಉರಿ ಎದ್ದಿದೆ. ನರಿಯು ಬಾಲಕ್ಕೆ ಸರೊಳಿ ಸಪ್ಪು ಕಟ್ಟಿ ಆರಿಸುತ್ತಿದೆ. ಗಿಡುಗ ರೆಕ್ಕೆಯಲ್ಲಿ ನೀರು ಒಯ್ದು ನಂದಿಸುತ್ತಿದೆ"

ಮಕ್ಕಳ ಎದುರುತ್ತರ ಕೇಳಿ ಚೆನ್ನಯ ಕೆರಳಿದ. ಸುರಿಯ ಹಿಡಿದು ಮಕ್ಕಳನ್ನು ಓಡಿಸಿದ.

"ಬೇಡ ತಮ್ಮ ಗೋವು ಮೇಯಿಸುವ ಮಕ್ಕಳನ್ನು ಕೊಂದರೆ ಪಾಪವಿದೆ. ಅವರಲ್ಲಿ ಪಯಣಕ್ಕೆ ಹಾದಿ ಕೇಳೋಣ. ಪಯ್ಯಬೈದ್ಯನ ಮನೆ ಹುಡುಕೋಣ"

ಕೋಟಿ ತಮ್ಮನಿಗೆ ಸಮಾಧಾನ ಹೇಳಿದ. ಗೋವಳರು ಭಯ ಪಟ್ಟರು. ಬಂಟರಿಗೆ ದಾರಿ ತೋರಿಸಿದರು.

"ಎಡಕ್ಕೆ ಹೋದರೆ ಎಣ್ಮೂರಿಗೆ ದಾರಿ. ಬಲಕ್ಕೆ ಹೋದರೆ ಪಂಜಕ್ಕೆ. ಎಡ ಬಲ ಬಿಡಿ. ನಡು ದಾರಿ ಹಿಡಿಯಿರಿ. ಕೋಣ ಹೋಗುವ ಹೆದ್ದಾರಿಯಿದೆ. ಆ ದಾರಿ ಹಿಡಿದರೆ ಪಯ್ಯಬೈದನ ಮನೆ ಸಿಗುತ್ತದೆ."

ಬಂಟರು ಪಯ್ಯನ ಮನೆ ಕೇಳುತ್ತ ಮುಂದೆ ನಡೆದರು.

ಕಿನ್ನಿದಾರು ಯಾರು?

ಕಿನ್ನಿದಾರು ಕೋಟಿ ಚೆನ್ನಯರ ಅಕ್ಕ. ತಮ್ಮಂದಿರು ಹುಟ್ಟುವ ಮೊದಲೇ ಅವಳನ್ನು ಮದುವೆ ಮಾಡಿ ಕೊಟ್ಟು ಆಗಿತ್ತು. ಪಯ್ಯಬೈದ್ಯ ಅವಳ ಗಂಡ. ಅವಳು ಇದುವರೆಗೆ ಕೋಟಿ ಚೆನ್ನಯರನ್ನು ನೋಡಿದವಳಲ್ಲ. ಆದರೆ ಅವರ ಕಲಿತನದ ಬಗ್ಗೆ ಕೇಳಿ ತಿಳಿದಿದ್ದಳು.

ದಾರಿ ನಡೆದು ಕೋಟಿ ಚೆನ್ನಯರು ಒಂದು ಮನೆಗೆ ಬಂದರು. ಆಸರಿಗೆ ನೀರು ಕೇಳಿದರು. ಮನೆಯೊಳಗೆ ಹೆಂಗಸು ಮಾತ್ರ ಇದ್ದಾಳೆ. ಆಕೆ ಒಳಗಿನಿಂದಲೇ ಹೇಳಿದಳು.

"ಬಂಟ ಬಾರಗರಾದರೆ ಕೆಂದಾಳೆಯ ಪದ್ಮಕಟ್ಟೆಯಿದೆ. ಜಾತಿ ಸಂಗತರಾದರೆ ಚಾವಡಿಯ ತೂಗು



ಮಂಚವಿದೆ. ಅಲ್ಲಿ ಕುಳಿತುಕೊಳ್ಳಿ"

ಕಿನ್ನಿದಾರು ಸಿರಿಗಿಂಡೆಯಲ್ಲಿ ನೀರು ತಂದು ಹೊರಗೆ ಇಟ್ಟಳು.

"ನಾವು ಕುಲ ಕೇಳದೆ ನೀರು ಕುಡಿಯೆವು. ನಿನ್ನ ಕುಲ ಕೇಳಬಹುದೇ" ಆಕೆಯನ್ನು ಪ್ರಶ್ನಿಸಿದರು.

"ಅದು ಮುಗಿಯದ ಕತೆ. ಆದರೂ ನೀವು ಕೇಳಿದ್ದಕ್ಕೆ ಹೇಳುತ್ತೇನೆ"

ಕಿನ್ನಿದಾರು ತನ್ನ ಕತೆ ಹೇಳಿದಳು.

ದಾರು ಹೇಳಿದ ಕಥೆ

"ನನ್ನ ತಾಯಿ ದೇಯಿ ಬೈದೆದಿ. ನನ್ನ ಹೆಸರು ಕಿನ್ನಿದಾರು. ಏಳು ವರ್ಷದಲ್ಲೇ ನನ್ನನ್ನು ಇಲ್ಲಿಗೆ ಮದುವೆ ಮಾಡಿ ಕೊಟ್ಟಿದ್ದಾರೆ. ಮತ್ತೆ ನಾನು ತವರುಮನೆ ನೋಡಲಿಲ್ಲ. ನನಗಿಂತ ಮೊದಲು ಹುಟ್ಟಿದ

ಗಂಡಾಗಲೀ, ಹೆಣ್ಣಾಗಲೀ ಇಲ್ಲ. ಅನಂತರ ಹುಟ್ಟಿದವರು ಗಂಡು ಮಕ್ಕಳಂತೆ. ಆದರೆ ಹೇಗಿದ್ದಾರೆ. ಏನಾಗಿದ್ದಾರೆ. ಎಂದು ನಾನು ತಿಳಿದವಳಲ್ಲ. ಅವರ ಹೆಸರು ಕೋಟಿ ಚೆನ್ನಯರಂತೆ. ನೋಡಲು ಚೆಲುವರಂತೆ. ತಮಗೆ ಆಗದವರನ್ನು ಸುಮ್ಮನೆ ಬಿಡುವವರಲ್ಲವಂತೆ. ಅವರು ತಮ್ಮ ಊರು ಬಿಟ್ಟು ಈ ಊರಿಗೆ ಬರುತ್ತಿದ್ದಾರಂತೆ. ಎಲ್ಲಿ ಹೋಗಿದ್ದಾರೋ ಏನೋ? ನಾನು ಅವರನ್ನು ನೋಡಲುಂಟೋ ಇಲ್ಲವೋ?"

ಕಿನ್ನಿದಾರು ತನ್ನನ್ನು ತಾನು ಮರೆತು ಕಥೆ ಹೇಳಿದಳು. ಬಂಟರು ಮುಖ ಮುಖ ನೋಡಿ ನಸು ನಕ್ಕರು.

"ಏನು ನೀವು ಯಾರು? ಏಕೆ ಹಾಗೆ ನಗುತ್ತೀರಿ?"

"ಅಕ್ಕಾ ನಾವೇ ಆ ಕೋಟಿ ಚೆನ್ನಯರು. ನಿನ್ನ ತಮ್ಮಂದಿರು"

"ಹಾಂ! ನೀವು ಕೋಟಿ ಚೆನ್ನಯರೇ! ನನ್ನ ತಮ್ಮಂದಿರೇ?"

ಕಿನ್ನಿದಾರು ತಮ್ಮಂದಿರನ್ನು ಅಪ್ಪಿಕೊಂಡಳು. ಒಳ ಚಾವಡಿಗೆ ಕರೆದು ತೂಗು ಮಂಚದಲ್ಲಿ ಕುಳ್ಳಿರಿಸಿದಳು. ಯೋಗಕ್ಷೇಮ ವಿಚಾರಿಸಿದಳು. ಆಸರು ನೀಡಿ ಉಪಚರಿಸಿದಳು.

ಪಯ್ಯನ ಪಿತೂರಿ

ಆಗ ಮೂರ್ತೆಗೆ ಹೋಗಿದ್ದ ಪಯ್ಯಬೈದ್ಯ ಬಂದ.

"ಮನೆಯೊಳಗೆ ಯಾರೋ ಗಂಡಸರು ಇದ್ದಾರೆ"

ಪಯ್ಯ ಸಂದೇಹ ಪಟ್ಟು ಮೆಲ್ಲ ಇಣುಕಿ ನೋಡಿದ. ನೆಲ್ಲಿಕಾಡಿನ ನೆನಪಾಯಿತು. ಹಿಂದಿನ ದಿನ ಕೋಟಿ ಚೆನ್ನಯರನ್ನು ಸೆರೆಹಿಡಿಯಲು ಕೆಲವರು ಕಾದು ಕುಳಿತಿದ್ದರು. ನೆಲ್ಲಿಕಾಡಿನಲ್ಲಿ ಹೊಂಚು ಹಾಕಿದವರಲ್ಲಿ ಪಯ್ಯನೂ ಒಬ್ಬ. ಆದರೆ ಕಾಡಿನ ಹೊರಗಿನಿಂದಲೇ ಬಂಟರು ಸಾಗಿದ್ದರು. ಸುರಿಯಗಳ ಮೊನೆಯಿಂದ ನೆಲ್ಲಿಕಾಯಿಗಳನ್ನು ಹಾರಿಸುತ್ತ ಚಮತ್ಕಾರದ ಆಟವಾಡುತ್ತಾ ಹೋಗುವ ದೃಶ್ಯವನ್ನು ನೋಡಿಯೇ ಪಯ್ಯ ಉಡುಗಿ ಹೋಗಿದ್ದ. ಈಗ ಅವೇ ಮುಖಗಳನ್ನು ನೋಡಿದ ಪಯ್ಯನಿಗೆ ಅಡಿ ತಪ್ಪಿ ಹೋಯಿತು.

"ಇವರ ಕೈಗೆ ಸಿಕ್ಕಿದರೆ ಗತಿಯೇನು?"

ಅಲ್ಲಿಂದಲೇ ಆತ ಓಡುವುದಕ್ಕೆ ನೋಡಿದ. ಅಷ್ಟರಲ್ಲಿ ಚೆನ್ನಯನೇ ಒಳಗಿನಿಂದ ಹಾರಿ ಹೊರ ಬಂದ.

"ಭಾವಾ ಹೇಗಿದ್ದೀರಿ?"

ಚೆನ್ನಯ ಪಯ್ಯನನ್ನು ಅಪ್ಪಿ ಹಿಡಿದ. ಪ್ರೀತಿಯ ಪೆಟ್ಟುಗಳು ಪಯ್ಯನ ಮೇಲೆ ಬಿದ್ದುವು. ಒಮ್ಮೆಗೆ ಪಯ್ಯ ಬದುಕಿಕೊಂಡ. ಅಕ್ಕನ ಮನೆಯಲ್ಲಿ ಬಂಟರಿಗೆ ಬಗೆ ಬಗೆಯ ಉಪಚಾರ ನಡೆಯಿತು. ಪಯ್ಯನಿಗೆ ಇಂತಹ ಬಂಟರಿಂದ 'ಭಾವಾ' ಎಂದು ಕರೆಸಿಕೊಳ್ಳುವ ಅಭಿಮಾನ ಒಂದೆಡೆ. ಇವರ ಕೈಯಲ್ಲಿ ಬದುಕುವುದು ಹೇಗೆ ಎನ್ನುವ ಭಯ ಇನ್ನೊಂದೆಡೆ. ಒಟ್ಟಿನಲ್ಲಿ ಧರ್ಮಸಂಕಟ!

ಚೆಂದುಗಿಡಿಯ ಪ್ರತಾಪ

ಪಂಜ ಸೀಮೆಯನ್ನು ಕೇಮರ ಬಲ್ಲಾಳ ಆಳುತ್ತಿದ್ದನು. ಪರ್ಮಲೆ ಬಲ್ಲಾಳ ಕೇಮರನಿಗೆ ಒಂದು ಓಲೆ ಬರೆದಿದ್ದ.

"ನಮ್ಮ ಊರಿನಿಂದ ಇಬ್ಬರು ಕೊಲೆಗಡುಕರು ತಪ್ಪಿಸಿ ನಿಮ್ಮ ಊರಿಗೆ ಬಂದಿದ್ದಾರೆ. ಎಲ್ಲಿದ್ದರೂ ಅವರನ್ನು ಹಿಡಿದು ಕೊಡಬೇಕು. ಇಲ್ಲವೇ ಕೊಂದು ಹಾಕಬೇಕು".

ಕೇಮರ ಬಲ್ಲಾಳ ತನ್ನ ಮಂತ್ರಿ ಚೆಂದುಗಿಡಿಗೆ ಬಂಟರನ್ನು ಪತ್ತೆ ಹಚ್ಚಲು ಹೇಳಿದ. ಕೋಟಿ ಚೆನ್ನಯರ ಶೌರ್ಯ ಸಾಹಸಗಳನ್ನು ಕೇಳಿ ಆತ ಹೆಮ್ಮೆ ಪಟ್ಟಿದ್ದ. ಬಂಟರನ್ನು ಬೀಡಿಗೆ ಕರೆಸಬೇಕು. ಅವರ ಸಾಹಸಗಳನ್ನು ನೋಡಬೇಕು ಎಂದು ಬಯಸಿದ್ದ. ಆದರೆ ಆಗ ಬಂದ ಓಲೆ ಅವನನ್ನು ಕಸಿವಿಸಿಗೊಳಿಸಿತು.

ಚೆಂದುಗಿಡಿಗೆ ಪಯ್ಯನ ಮೂಲಕವೇ ಬಂಟರ ಸುಳುಹು ತಿಳಿದು ಹೋಯಿತು.

"ಬಂಟರು ತನ್ನ ಸ್ಥಾನಕ್ಕೆ ಕುತ್ತು. ಅವರನ್ನು ಮುಗಿಸಿಬಿಡಬೇಕು."

ಇದು ಚೆಂದುಗಿಡಿಯ ಸ್ವಾರ್ಥ.

"ಅವರ ಕೊಲೆಗಡುಕರು. ಅಂತಹವರು ಎಲ್ಲಿದ್ದರೇನು?"

ಚೆಂದುಗಿಡಿ ಕೇಮರನ ಕಿವಿ ಊದಿದ.



ಸೆರೆ ಸಿಕ್ಕರು ಬಂಟರು

ಇತ್ತ ಪಂಜದ ಕೇಮರನ ಭೇಟಿಗಾಗಿಯೇ ಬಂಟರೂ ಕಾಯುತ್ತಿದ್ದರು. ಪಯ್ಯ ಅವರನ್ನು ಪಂಜದ ಬೀಡಿಗೆ ಕರೆ ತರಲು ಯೋಚಿಸಿದ. ಹಾದಿಯಲ್ಲಿ ಚೆಂದುಗಿಡಿ ಪರಿಚಯ ಮಾಡಿಸಿದ. ಆತ ಬಯಸಿದ್ದೇ ಸಿಕ್ಕಿದ ಹಾಗಾಯಿತು. ಇದೇ ತಕ್ಕ ಸಮಯ ಎಂದು ಚೆಂದುಗಿಡಿ ಅವರನ್ನು ಉಪಚರಿಸುವ ಸೋಗು ನಡೆಸಿದ.

ಚಂದುಗಿಡಿ ದಿಂಡುಮಲೆಯಲ್ಲಿ ಹೊಸ ಮಂದಿರವೊಂದನ್ನು ಕಟ್ಟಿಸುತ್ತಿದ್ದ. ಅದು

ಬಂಟರ ಪಾಲಿಗೆ ಸೆರೆಮನೆಯಾಯಿತು.

"ಕೇಮರ ಬಲ್ಲಾಳ ನಿಮ್ಮನ್ನು ನೋಡಲು ಬಯಸಿದ್ದಾನೆ"

ಚೆಂದುಗಿಡಿ ಬಂಟರನ್ನು ದಿಂಡುಮಾಲೆಗೆ ಕರೆದೊಯ್ದ. ದಿಂಡುಮಲೆಯ ಮುಂಡು ಮಾಳಿಗೆಯ ಸೋಜಿಗವನ್ನು ವಿವರಿಸಿದ. ಬಂಟರನ್ನು ಒಳಗೆ ಸ್ವಾಗತಿಸಿದ. ಬಂಟರು ಒಳ ಹೋಗುವುದೇ ತಡ. ಹೊರಗಿನಿಂದ ಬಾಗಿಲು ಮುಚ್ಚಿಕೊಂಡಿತು. ಹೊರಗಿನಿಂದ ಚೆಂದುಗಿಡಿ ಗಹಗಹಿಸಿ ನಕ್ಕ.

"ಸೊಕ್ಕಿದ ಬಂಟರೆ, ಸಿಕ್ಕಿದಿರಿ! ನೀವು ಇಲ್ಲೇ ಅನ್ನ ನೀರಿಲ್ಲದೆ ಸಾಯಬೇಕು."

ಆಗಲೇ ಬಂಟರಿಗೆ ತಾವು ಮೋಸ ಹೋದುದರ ಅರಿವಾದುದು.

ಧೈರ್ಯ ಮತ್ತು ದೇವರು

"ಏನಣ್ಣಾ ನಾವು ಇದ್ದ ಊರೂ ಕತ್ತಲೆ. ಹೋದ ಊರೂ ಕತ್ತಲೆ. ನಾವಿಂದು ಬೋನಿಗೆ ಬಿದ್ದ ಹುಲಿಗಳು"

ಚೆನ್ನಯ ಪರಿತಪಿಸಿದ.

"ನಾವು ಸರಳೆಮ್ಮೆಯ ಹಾಲು ಕುಡಿದವರು. ಯಾವುದಕ್ಕೂ ಅಂಜುವವರಲ್ಲ. ಹೇಗಾದರೂ ದಿಂಡುಮಲೆಯಿಂದ ಪಾರಾಗಬೇಕು. ಹೋರಾಡುವುದೇ ನಮ್ಮ ಗುರಿ"

ಕೋಟಿ ಬಲವಾಗಿ ಕಾಲಿನಿಂದ ಗೋಡೆಯನ್ನು ಒದ್ದ. ಎಲ್ಲಿಂದ ಎಂದು ತಿಳಿಯದು. ಕತ್ತಲೆಯನ್ನು ಸೀಳಿ ಬೆಳಕಿನ ಕಿರಣ ತೂರಿ ಬಂತು.

"ನಾವು ನಂಬಿದ ಕೆಮ್ಮಲೆಯ ಜಯ ಬ್ರಹ್ಮರೇ ನಮಗೆ ದಾರಿ ತೋರಿಸಿದರು"
ಸುರಿಯ ಹಾಕಿ ಗೋಡೆಯ ಬಿರುಕನ್ನು ಕೊರೆದು ಅಗಲ ಮಾಡಿದರು. ಗೋಡೆ ಒಡೆದು ಹೋಯಿತು. ಬಂಟರು ಹೊರ ಬಂದರು.

"ಈ ಊರಲ್ಲಿ ನಿಲ್ಲಬಾರದು"

ಅಣ್ಣತಮ್ಮಂದಿರು ಮುಂದೆ ನಡೆದರು.

ಇನ್ನೊಬ್ಬ ಬಲ್ಲಾಳ

ಎಣ್ಮೂರು ಸೀಮೆಗೆ ಒಡೆಯ ದೇವ ಬಲ್ಲಾಳ. ಆತ ಪರೋಪಕಾರಿ. ನ್ಯಾಯ ನಿಷ್ಠ. ಪಂಜಕ್ಕೂ ಎಣ್ಮೂರಿಗೆ ನಡುವೆ ತುಪ್ಪೆಕಲ್ಲು ಕಾಡು. ಕೇಮರ ಬಲ್ಲಾಳ ಚೆಂದುಗಿಡಿಯ ಮೂಲಕ ಗಡಿಕಲ್ಲನ್ನು ಮುಂದೆ ಹಾಕಿಸಿದ್ದ. ಪಂಜದ ಸೀಮೆಯನ್ನು ವಿಸ್ತರಿಸಿಕೊಂಡಿದ್ದ.

ದಿಂಡುಮಲೆಯಿಂದ ಪಾರಾದ ಬಂಟರು ಎಣ್ಮೂರು ಕಡೆ ಸಾಗಿದರು. ಗಡಿಕಲ್ಲು ಕಿತ್ತು ಮುಂದೆ ಹಾಕಿರುವ ಸಂಗತಿ ಚೆನ್ನಯನಿಗೆ ಹೇಗೋ ತಿಳಿಯಿತು.

"ಇದು ಎಣ್ಮೂರಿಗೆ ಸೇರಬೇಕಾದ ಊರು. ಮೋಸವಾಗಿದೆ."

ಬಂಟರು ಗಡಿಕಲ್ಲನ್ನು ಕಿತ್ತು ಮೊದಲ ಜಾಗದಲ್ಲೇ ನೆಟ್ಟರು.

ತನ್ನ ಸೀಮೆಯತ್ತ ಇಬ್ಬರು ವೀರರು ಬರುತ್ತಿರುವ ಸುದ್ದಿ ದೇವ ಬಲ್ಲಾಳನಿಗೆ ಹೋಯಿತು. ಆತ ಅವರನ್ನು ತನ್ನ ಸೀಮೆಯಲ್ಲಿ ಉಳಿಸಿಕೊಳ್ಳಲು ಬಯಸಿದ ಬೀಡಿಗೆ ಕರೆತರಲು ಕಿನ್ನಿ ಚೆನ್ನಯನನ್ನು ಕಳುಹಿಸಿದ. ಕಿನ್ನಿ ಚೆನ್ನಯ ಕೋಟಿ ಚೆನ್ನಯರನ್ನು ಭೇಟಿಯಾಗಿ ವಿಷಯ ತಿಳಿಸಿದ. ಕೋಟಿ ಚೆನ್ನಯರು ಅಲ್ಲಿಂದ ಕೆಮ್ಮಲೆಗೆ ಹೋಗಿ ತಮ್ಮ ಕುಲದೇವರಾದ ಬ್ರಹ್ಮನಿಗೆ ಹರಕೆ ಸಲ್ಲಿಸಿದರು. ದೇವ ಬಲ್ಲಾಳನಿಗೆ ಆಹ್ವಾನದಂತೆ ಎಣ್ಮೂರು ಬೀಡಿಗೆ ಬಂದರು. ಅವರು ತನ್ನ ಸೀಮೆಯಲ್ಲೇ ಉಳಿಯುವಂತೆ ಬಲ್ಲಾಳ ಅವರಿಗೆ ಊರು ಉಂಬಳಿ ನೀಡಿ ಗೌರವಿಸಿದ. ಕೋಟಿ ಚೆನ್ನಯರು ಎಣ್ಮೂರಲ್ಲಿ ನೆಲೆ ನಿಂತರು. ಪಡಿಲು ಬಿದ್ದ ಗದ್ದೆಗಳನ್ನು ಬೇಸಾಯ ಮಾಡಿದರು.

ಬೇಟೆಯ ನೆಪ ಕಲಹಕ್ಕೆ ಕಾರಣ

ಒಂದು ಬಾರಿ ಬಂಟರಿಗೆ ಬೇಟೆಯಾಡುವ ಮನಸ್ಸಾಯಿತು. ತುಪ್ಪೆಕಲ್ಲು ಕಾಡಿಗೆ ಬೇಟೆಗ ಹೊರಡುವ ಸಿದ್ಧತೆ ನಡೆಯಿತು. ಬೇಟೆ ನಾಯಿಗಳು, ಬಿಲ್ಲು ಬಾಣ, ಕತ್ತಿ ಕಠಾರಿ ಬರ್ಜಿಗಳು ಸಿದ್ಧವಾದುವು. ಬೇಟೆಯಲ್ಲಿ ಕಾಡು ಹಂದಿಯೊಂದು ಎದ್ದು ಓಡತೊಡಗಿತು. ಹಂದಿಯನ್ನು ಬಂಟರು ಬೆನ್ನಟ್ಟಿದರು. ಚೆನ್ನಯನು ಹರಿತವಾದ ಪಗರಿ ಎಸೆದ. ಎಸೆದ ಬಾಣ ಹಂದಿಗೆ ನಾಟಿತು. ಅದು ನೋವಿನಿಂದ ಪಂಜದ ಕಾಡಿನಲ್ಲಿ ಪ್ರಾಣ ಬಿಟ್ಟಿತು. ಬಿದ್ದ ಹಂದಿಯ ಬಳಿ ಬಂಟರು ನಿಂತರು. ತಾವು ಗಡಿ ದಾಟಿ ಬಂದ ಸಂಗತಿ ತಿಳಿಯಿತು. ತಾವು ಕೊಂದ

ಹಂದಿಯೆಂದು ಅದನ್ನು ಆಳುಗಳಲ್ಲಿ ಹೊರಿಸಿದರು. ಆಗ ಪಂಜದ ಕಾವಲು ಪಡೆ ತಡೆಯಿತು. ತಮ್ಮ ಸೀಮೆಯಿಂದ ಹಂದಿಯನ್ನು ಒಯ್ಯಲು ಪಂಜದ ಜನರು ಬಿಡಲಿಲ್ಲ. ಆದರೆ ಹಂದಿ ತುಪ್ಪೆಕಲ್ಲು ಕಾಡಿನದು. ತುಪ್ಪೆಕಲ್ಲು ಕಾಡೂ ವಿವಾದಕ್ಕೆ ಸೇರಿದ್ದು. ಹೀಗೆ ಈ ಮಾತುಕತೆ ಜಗಳಕ್ಕೆ ನಾಂದಿಯಾಯಿತು. ತಡೆದ ದಂಡಾಳುಗಳನ್ನು ಚೆನ್ನಯ ಬಡಿದ ಹಂದಿಯನ್ನು ಎಣ್ಮೂರಿಗೆ ಸಾಗಿಸಿದ.

ಒಕ್ಕಣೆಯ ಓಲೆ

ಇಷ್ಟಕ್ಕೇ ಪಂಜದವರು ಬಿಟ್ಟು ಕೊಡಲಿಲ್ಲ. ಎಣ್ಮೂರಿನ ಜತೆ ಸೆಣೆಸಾಡಲು ತಕ್ಕ ಸಮಯ ಇದೇ ಎಂದುಕೊಂಡರು. ಚೆಂದುಗಿಡಿ ಆದ ಅವಮಾನವನ್ನು ಕೇಮರ ಬಲ್ಲಾಳನಿಗೆ ವಿವರಿಸಿದ.

"ಹೊತ್ತುಕೊಂಡು ಹೊದ ಹಂದಿಯನ್ನು ತಂದೊಪ್ಪಿಸಲಿ. ಇಲ್ಲವೇ ಕ್ಷಮೆ ಯಾಚಿಸಲಿ"

ಕೇಮರ ಬಲ್ಲಾಳ ಓಲೆ ಬರೆಸಿ ಎಣ್ಮೂರಿಗೆ ಕಳುಹಿಸಿದ.

ದೇವ ಬಲ್ಲಾಳ ಓಲೆ ಓದಿಸಿದ. ಮಂತ್ರಿ ಮಂಜು ಪೆರ್ಗಡೆ ಓಲೆ ಓದಿದ.

"ಎಣ್ಮೂರಿನವರು ಅಕ್ರಮವಾಗಿ ಸೀಮೆಯನ್ನು ವಿಸ್ತರಿಸಿಕೊಂಡಿದ್ದಾರೆ. ನಮ್ಮ ಕಾಡಿನಲ್ಲಿ ಹಂದಿಯನ್ನು ಕೊಂದಿದ್ದಾರೆ. ಆದದ್ದಾಗಲೀ, ಈಗಲಾದರೂ ಕೊಂದ ಹಂದಿಯೊಂದಿಗೆ ಗಡಿಕಲ್ಲು ಕಿತ್ತ ಬಂಟರನ್ನು ತಂದೊಪ್ಪಿಸಬೇಕು. ಇಲ್ಲವಾದರೆ ದಂಡು ಸಹಿತ ಕಾದಾಟಕ್ಕೆ ತಯಾರಾಗಲಿ. ಇದು ಸಾಧ್ಯವಾಗದೆ ಹೋದರೆ ಬಲ್ಲಾಳರು ಸೀರೆ ಕುಪ್ಪಸ ತೊಡಲಿ. ಹೆಣ್ಣಾಗಿ ಬಳೆಯಿಟ್ಟು ನಿಂತಿರಲಿ. ನಾವು ದಿಬ್ಬಣ ತರುತ್ತೇವೆ"

ಓಲೆಯ ಒಕ್ಕಣೆಯಿದು.

"ಏನು ಧೈರ್ಯದ ಮಾತು!"

ದೇವ ಬಲ್ಲಾಳ ಕೋಟಿ ಚೆನ್ನಯರ ಕಡೆಗೆ ತಿರುಗಿ ನೋಡಿದ.

"ನಾವಿರುವಲ್ಲಿ ನಿಮಗೆ ಕಳಂಕ ತರುವ ಕೆಲಸಕ್ಕೆ ಎಡೆಕೊಟ್ಟೆವು. ನಿಮ್ಮ ಕೀರ್ತಿಗೆ ನಮ್ಮ ಶಕ್ತಿ ಸಾಮರ್ಥ್ಯದ ವಿನಿಯೋಗ ಆಗುವುದಿದ್ದಲ್ಲಿ ಅದೇ ನಮಗೆ ತೃಪ್ತಿ"

ಕೋಟಿ ಬಲ್ಲಾಳನಿಗೆ ಧೈರ್ಯ ನೀಡಿದ.

ಗಿಡುಗನ ಹಾರಾಟ ನಿಂತಿತು

ಕೆಲವೇ ದಿನಗಳಲ್ಲಿ ಚೆನ್ನಯ ದಂಡಿನ ಮುಂದಾಳು ಆದ. ಬೀಡಿನ ಬಾಕಿಮಾರು ಗದ್ದೆಯಲ್ಲಿ ದಂಡು ನೆರೆಯಿತು. ಪಂಜದವರು ಆಗಲೇ ಬಂದು ಬೀಡು ಬಿಟ್ಟಿದ್ದರು. ಎರಡೂ ಕಡೆಯವರಿಗೂ ನಿಗದಿಪಡಿಸಿದ ದಿನ ಕಾದಾಟ ಆರಂಭವಾಯಿತು. ಚೆಂದುಗಿಡಿ ಇದ್ದಕ್ಕಿದ್ದ ಹಾಗೆ ಚೆನ್ನಯನಿಗೆ ಇದಿರಾದನು.

"ದಿಂಡುಮಲೆಯಲ್ಲಿ ಕೂಡಿ ಹಾಕಿದರೂ ತಪ್ಪಿಸಿಕೊಂಡವರು ನೀವು. ಆದರೆ ಇಂದು ತಪ್ಪಿಸಿಕೊಳ್ಳುವ ಹಾಗಿಲ್ಲ"

ಚೆಂದುಗಿಡಿ ಹಾರಾಡಿದ.

"ನೀನೋರ್ವ ನಯವಂಚಕ. ಇಂದು ನೋಡೋಣ ನಿನ್ನ ಚಮತ್ಕಾರ"

ಚೆನ್ನಯ ಕೆರಳಿ ನಿಂತ. ಇಬ್ಬರಿಗೂ ಕಾದಾಟ ನಡೆಯಿತು. ಕತ್ತಿ ವರಸೆ, ಮುಷ್ಟಿ ಯುದ್ಧ ಎಲ್ಲ ನಡೆದುವು ಕೊನೆಗೂ ಚೆನ್ನಯನ ಸುರಿಯಕ್ಕೆ ಚೆಂದುಗಿಡಿ ಬಲಿಯಾದ.

ಕೈ ಮೀರಿ ಹೋದ ಕೆಲಸ

ಕೇಮರ ಬಲ್ಲಾಳ ಮಂತ್ರಿಯನ್ನು ಕಳೆದುಕೊಂಡ. ಆತನ ಅರೆ ಪಾಲು ತಾಕತ್ತು ನಿಂತು ಹೋದ ಹಾಗಾಯಿತು. ಮರುದಿನ ಆತನೇ ಕೋಟಿ ಚೆನ್ನಯರನ್ನು ಯುದ್ಧದಲ್ಲಿ ಸಂಧಿಸಿದ. ಕೋಟಿ ಚೆನ್ನಯರಿಗೆ ಒಂದೇ ಕಡೆ ಹೋರಾಡುವ ಅವಕಾಶ ತಪ್ಪಿ ಹೋಯಿತು. ಕೇಮರ ಕೋಟಿಯನ್ನು ಎದುರಿಸಿದ.

"ಬಲ್ಲಾಳರೇ ನಿಮ್ಮನ್ನು ಕಾಣಲು ನಾವು ಬಯಸಿ ಬಂದರೆ ನಮ್ಮನ್ನೇ ಬಂಧಿಸುವಷ್ಟು ನೀವು ಮುಂದೆ ಹೋದಿರಿ. ಇದು ಯಾವ ನ್ಯಾಯ ಹೇಳಿ?"

ಕೋಟಿ ಕೇಮರನಲ್ಲಿ ಪ್ರಶ್ನಿಸಿದ.

"ನೀವು ಕೊಲೆಪಾತಕಿಗಳು. ನಿಮ್ಮನ್ನು ಹಾಗೇ ಬಿಡುವುದು ಮಹಾಪಾಪ"

ಕೋಟಿಯ ಸವಾಲಿಗೆ ಕೇಮರ ಉತ್ತರಿಸಿದ. ಕೋಟಿ ಹಾಗೂ ಕೇಮರ ಸುರಿಯ ಹಿಡಿದು ಹೋರಾಡಿದರು.

ಆಗಲೇ ಕೇಮರನ ಕೈಯಿಂದ ಕತ್ತಿ ಕೆಳಗೆ ಬಿತ್ತು. ಕತ್ತಿಯನ್ನು ಕಳೆದುಕೊಂಡ ಕೇಮರ ತಪ್ಪಿಸಿಕೊಳ್ಳಲು ಓಡತೊಡಗಿದ.

"ಬಲ್ಲಾಳರೇ ಓಡಬೇಡಿ. ನಿಮ್ಮನ್ನು ಕೊಲ್ಲುವುದಿಲ್ಲ"

ಕೋಟಿ ಕೇಮರನನ್ನು ಕರೆದು ಹೇಳಿದ.

ಆಗ ಎಲ್ಲಿಂದಲೋ ತಿಳಿಯದು ಕೋಟಿಯ ಅಳ್ಳೆಗೆ ಹರಿತವಾದ ಪಗರಿಯೊಂದು ಬಂದು ನಾಟಿತು. ಆತ ಅಲ್ಲೇ ಕುಸಿದ.

"ಎಲ್ಲಿಂದ ಈ ಬಾಣ"?

ಕೋಟಿ ತಿರುಗಿ ನೋಡಿದರೆ ಹಿಂದಿನಿಂದ ಪರ್ಮಲೆ ಬಲ್ಲಾಳ ನಿಂತಿದ್ದಾನೆ. ಆದರೆ ಆತನಿಗೆ ಮುಖ ತೋರಿಸಲು ಧೈರ್ಯವಿರಲಿಲ್ಲ. ಇದನ್ನು ನೋಡಿ ಕೋಟಿಗೆ ಏನು ಹೇಳಬೇಕೋ ತಿಳಿಯಲಿಲ್ಲ.

"ಬಲ್ಲಾಳರೇ ಕೊನೆಗೂ ಹಗೆ ಸಾಧಿಸಿಯೇ ಬಿಟ್ಟಿರಲ್ಲಾ? ನಿಮ್ಮ ತೊಡೆಯೇರಿ ಬೆಳೆದ ಮಕ್ಕಳನ್ನು ಕೊಲ್ಲಲು ಹೇಗೆ ನಿಮಗೆ ಮನಸ್ಸು ಬಂತು? ನಿಮ್ಮ ಕಾಲ ಬುಡದಲ್ಲಿ ಪ್ರಾಣ ಒಪ್ಪಿಸಬೇಕೆಂದು ನಾವು ಬಯಸಿದ್ದೆವು. ಕೊನೆಗೂ ಅನ್ನದ ಋಣ ಅಷ್ಟು ಮಾಡಿಸಿತು".

ಕೋಟಿಯ ಮಾತುಗಳನ್ನು ಕೇಳಿ ಬಲ್ಲಾಳನಿಗೆ ಸಹಿಸಲಾಗಲಿಲ್ಲ. ಒಂದೊಂದು ಮಾತೂ ಎದೆಗೆ ಪಗರಿಯಾಗಿ ಇರಿಯಿತು.

"ಕೋಟಿ! ನಿನ್ನನ್ನು ಕೊಲ್ಲಲು ನಾನು ಬಾಣ ಬಿಟ್ಟಿದ್ದಲ್ಲ. ಅದು ಕೈ ಮೀರಿ ಹೋದ ಕೆಲಸ. ಎತ್ತಿ ಆಡಿಸಿದ ಕೈಗಳೇ ನಿನ್ನನ್ನು ಕೊಲ್ಲುವುದಕ್ಕೆ ಮುಂದಾದುವು. ಇನ್ನೊಂದು ಕ್ಷಣದಲ್ಲಿ ನಾನಿಲ್ಲಿ ಉಳಿಯಬಾರದು"

ಪರ್ಮಲೆ ಬಲ್ಲಾಳ ತನ್ನ ಕತ್ತಿಯಿಂದಲೇ ಎದೆಗೆ ಚುಚ್ಚಿಕೊಳ್ಳಲು ಮುಂದಾದ. ಆಗ ಕೋಟಿ ಆತನಿಂದ ಕತ್ತಿ ಸೆಳೆದುಕೊಂಡ.

"ಇಲ್ಲ ಬಲ್ಲಾಳರೇ ನೀವು ಸಾಯಬಾರದು. ನೀವು ಬದುಕಬೇಕು. ಆದರೆ ನಾನಿನ್ನು ಹೆಚ್ಚು ಹೊತ್ತು ಇರಲಾರೆ"

ಆಗ ಅಲ್ಲಿಗೆ ದೇವ ಬಲ್ಲಾಳನೂ ಬಂದ. ಅವರನ್ನು ನೋಡುತ್ತಲೇ

"ಬಲ್ಲಾಳರ ನೀವು ಹಾಲು ಅನ್ನ ನೀಡಿದವರು. ನಿಮ್ಮ ಉಪಕಾರ ಹೇಗೆ ಮರೆಯಲಿ? ನಿಮ್ಮ ಬೀಡು ಸಾವಿರ ಕಾಲದ ಸತ್ಯದ ನೆಲೆಯಾಗಿ ಬೆಳಗಲಿ. ನಾನು ಬದುಕಿದ್ದಾಗ ನನ್ನವರಿಗಾಗಿ ಏನೂ ಮಾಡಲಿಲ್ಲ. ಈಗ

ನನ್ನದೊಂದು ಮಾತನ್ನು ನೀವು ನಡೆಸಿಕೊಡಬೇಕು. ನೀವು ಮೂವರು ಬಲ್ಲಾಳರುಗಳು ಬೇರೆ ಬೇರೆಯಾಗಿದ್ದರೂ ಪ್ರೀತಿಯಿಂದ ಇರಬೇಕು. ನನ್ನ ನೆನಪಿಗಾಗಿ ನೀವು ಒಟ್ಟಾಗಿ ನನಗೊಂದು ಗರಡಿ ಕಟ್ಟಿಸಿಕೊಡಿ. ನಮ್ಮ ಜಾತಿ ಮಕ್ಕಳಿಂದ ಪೂಜೆ ಮಾಡಿಸುವ ವ್ಯವಸ್ಥೆ ಮಾಡಿ ಕೊಡಿ"

ಕೋಟಿಯ ತಲೆಯನ್ನು ದೇವ ತನ್ನ ತೊಡೆಯ ಮೇಲೆ ಇರಿಸಿಕೊಂಡ. ಕೋಟಿಯ ಕೊನೆಗಾಲ ಸಮೀಪಿಸಿತು. ನಾಟಿದ್ದ ಪಗರಿಯನ್ನು ಎಳೆದಾಗ ಆತನ ಪ್ರಾಣ ಹೋಗಿತ್ತು. ಅಷ್ಟರಲ್ಲಿ ಬೇರೆ ಕಡೆ ಹೋರಾಟ ಮುಗಿಸಿ ಚೆನ್ನಯನೂ ಅಲ್ಲಿಗೆ ಬಂದ. ಅಣ್ಣನ ದೇಹ ಬಿದ್ದಿರುವುದನ್ನು ಕಂಡ

"ಅಣ್ಣಾ! ಇದೇನು ನಡೆಯಿತು? ಇದೋ ನಾನೂ ಬಂದೆ!"

ಎಂದವನೇ ಅಲ್ಲಿದ್ದ ಹಾಸುಗಲ್ಲಿಗೆ ತಲೆ ತಾಗಿಸಿ ತನ್ನ ಪ್ರಾಣ ಕಳೆದುಕೊಂಡ. ಅಣ್ಣ ತಮ್ಮಂದಿರ ಯಮಳ ಶರೀರಗಳು ಒಟ್ಟಾಗಿ ಒಂದೆಡೆ ಬಿದ್ದವು.

ವೀರರ ಮರು ಹುಟ್ಟು

ಕೋಟಿ ಚೆನ್ನಯರ ನೆನಪಿಗಾಗಿ ಕಟ್ಟಿಸಿದ ಗರಡಿಗಳನ್ನು ತುಳುನಾಡಿನಲ್ಲಿ ಅಲ್ಲಲ್ಲಿ ಇಂದು ಕಾಣಬಹುದು. ಜತೆಯಾಗಿ ಹುಟ್ಟಿ ಜತೆಯಲ್ಲಿ ಬೆಳೆದು ಅಪ್ರತಿಮ ವೀರರಾಗಿ ಅವರು ಬದುಕಿದರು. ಈ ವೀರರು ಕೊನೆಯವರೆಗೂ ಅನ್ಯಾಯದ ವಿರುದ್ಧ ಹೋರಾಡಿದವರು. ಸತ್ಯಕ್ಕೆ ಎದೆಯಲ್ಲಿ ಅನ್ಯಾಯಕ್ಕೆ ಸುರಿಯದ ಮೊನೆಯಲ್ಲಿ ಹಾದಿ ತೋರಿಸಿದವರು. ಅವರು ಯಾರ ಹಂಗಿಗೂ ಒಳಗಾದವರಲ್ಲ. ತಮಗೆ ಕಂಡಂತೆ ನಡೆದವರು. ಮೇಲು ವರ್ಗದವರು ಕೆಲವರ್ಗದವರ ಮೇಲೆ ದಬ್ಬಾಳಿಕೆ ನಡೆಸಿದ್ದು ಹೌದು. ಕೋಟಿ ಚೆನ್ನಯರಂತಹ ಸ್ವಾಭಿಮಾನಿಗಳು ಇದ್ದುದೂ ಹೌದು. ಹಾಗೆ ಅನ್ಯಾಯದ ವಿರುದ್ಧ ಬಂಡಾಯ ಎದ್ದವರು, ಹೋರಾಡಿದವರು ಈ ಸಹೋದರರು. ಅಂತಹ ಒಂದು ಕತೆಯೇ ಕೋಟಿ ಚೆನ್ನಯ. ತುಳುನಾಡಿನ ಇನ್ನೂರಕ್ಕೂ ಹೆಚ್ಚಿನ ಗರೊಡಿಗಳಲ್ಲಿ ಈ ವೀರರು ಪೂಜನೀಯರು. ಉದ್ಯಾವರ, ಎಣ್ಮೂರು, ಏಣಗುಡ್ಡೆ, ಎರ್ಮಾಳು, ಕಂಕನಾಡಿ, ಕನಕರ ಬೆಟ್ಟು, ಕಲ್ಯ. ಕೊಡಿಪಾಡಿ, ತೋಡಾರು, ದೈಲಬೆಟ್ಟು, ನಕ್ರೆ, ನಿಟ್ಟೆ, ಪಂಜ, ಪಳ್ಳಿ, ಪಾಂದೆ, ಪೆರಾಜೆ, ಬನ್ನಾಡಿ, ಬಸ್ರೂರು, ಬಾಳೇಶ್ವರ, ಬಿಜೂರು, ಬೆಳುವಾಯಿ, ಬೋಳ, ಮಿಜಾರು, ಮೂಡುಬೆಳ್ಳೆ, ರೆಂಜಾಳ, ಶೀರ್ತಾಡಿ, ಶೇಣಿ, ಸಾಣೂರು, ಸೂಡ, ಹಂಡೇಲು, ಹಂದಾಡಿ, ಹೆಜಮಾಡಿ, ಹೆಬ್ರಿ, ಹೊಳೆಬಾಗಿಲು ಮೊದಲಾದವು ಅಂತಹ ಗರೊಡಿಗಳು.

ಇವರ ಹಾಗೆ ಇರುವ ಅವಳಿ ವೀರರ ಚರಿತ್ರೆ, ಕತೆಗಳು ತುಳುನಾಡಿನಲ್ಲಿ ಬೇಕಷ್ಟು ಇವೆ. ಅಂತಹ ಕತೆಗಳನ್ನು ಇನ್ನೊಮ್ಮೆ ಹೇಳುವೆ.

ಕೆಲವು ಪದಗಳ ಅರ್ಥ

ಅಗೆಲು = ಅಲೌಕಿಕ ವ್ಯಕ್ತಿಗಳಿಗೆ ಹಾಗೂ ಶಕ್ತಿಗಳಿಗೆ ವಿಧಿವತ್ತಾಗಿ ಬಡಿಸುವ ಔತಣ

ಅಮೆ ಸೂತಕ = ಹೆತ್ತ ಸೂತಕ

ಏರಾಜೆ = ಒಂದು ಸ್ಥಳದ ಹೆಸರು

ಕದಿನ = ಸುಡುಮದ್ದು

ಕುಜುಂಬ ಕಾಂಜ = ಕೋಟಿ ಚೆನ್ನಯರ ಭಾವನೆಂದು ಹೇಳಲಾಗುವ ಓರ್ವ ಅಲೌಕಿಕ ವ್ಯಕ್ತಿ

ಕೋಲ = ನೇಮ, ಜಾತ್ರೆ

ಕೇಂಜವ = ಒಂದು ವಿಧದ ಹಕ್ಕಿ

ಗರೊಡಿ = ಕೋಟಿ ಚೆನ್ನಯರ ಆರಾಧನ ಕೇಂದ್ರ, ಹಿಂದಿನ ಕಾಲದ ಯೋಧ ಶಿಕ್ಷಣ ಶಾಲೆ, ಗರಡಿ

ಗೋದಿಗೆಯ ಕಂಬ = ಚಿತ್ತಾರವಿರುವ ಮನೆಯ ಚಾವಡಿಯ ಕಂಬ

ಗೋರುವುದು = ಕೊನೆಯ ಹಂತದ ಉಳುಮೆ

ಚಪ್ಪರ ಕೊಂಬು = ಬೈದರ್ಕಳ ವೇಷದ ಶಿರೋಭೂಷಣ

ದಂಡಿಗೆ = ಪಾಲಕಿ

ನೇಮ = ನಿರ್ದಿಷ್ಟ ದೈವಗಳಿಗೆ ನಡೆಯುವ ಆರಾಧನೆ, ಕೋಲ

ಪಗರಿ = ಬಾಣ

ಪದ್ಮ ಕಟ್ಟೆ = ಮನೆಯ ಮುಂದೆ ಅಂಗಳದಲ್ಲಿ ಕುಳಿತುಕೊಳ್ಳಲು ವ್ಯವಸ್ಥೆಯಿರುವ ಮರದ ಕಟ್ಟೆ

ಬೀರ = ಆರಾಧನೆಯಲ್ಲಿ ಹೇಳಲಾಗುವ ಪಾಡ್ದನ, ವೀರ ಕಥನ

ಬರಿಕೆ = ಒಂದು ಮನೆತನದ ಹೆಸರು

ಬೆರ್ಮೆರ್ = ಒಂದು ಪ್ರಾಚೀನ ಮತ್ತು ಪ್ರಧಾನ ದೈವ, ಬ್ರಹ್ಮ

ಬೈದ್ಯೆರ್ಲು = ಬೈದರ್ಕಳು, ದೈವತ್ವಕ್ಕೇರಿದ ಕೋಟಿ ಚೆನ್ನಯರಿಗಿರುವ ಹೆಸರು

ಮಿರಿಲೋಕ = ದೇವಲೋಕ

ಸಂದಿ = ಪಾಡ್ದನ

ಸಿರಿಗಂಡಿ = ಚಿಕ್ಕ ತಂಬಿಗೆ

ಸರಳೆಮ್ಮೆ = ಒಂದು ಜಾತಿಯ ಎಮ್ಮೆ

○○○○

ಜೋಕ್ಲೆಗಾದ್ ತುಳು ಕತೆಕ್ಕುಲು

1.	ಕೋಟಿ- ಚೆನ್ನಯ	:	ಡಾ. ವಾಮನ ನಂದಾವರ
2.	ಅಕ್ಕೆರಸು ಸಿರಿ	:	ಎ. ವಿ. ನಾವಡ
3.	ಕೋಡ್ದಬ್ಬು	:	ಡಾ. ಸುಶೀಲಾ ಉಪಾಧ್ಯಾಯ
4.	ಪರತಿ ಮಂಗನೆ	:	ಕೆ. ಲೀಲಾವತಿ
5.	ಪುಳ್ಕೂರ ಬಾಚೆ	:	ವೆಂಕಟರಾಜ ಪುಣಿಂಚತ್ತಾಯ
6.	ಅಬ್ಬಗೆ ದಾರಗೆ	:	ಕೆ.ಜೆ. ಶೆಟ್ಟಿ ಕಂಡಂದಲೆ
7.	ಮೂಂಕು ಸಂಬಳೊ	:	ಡಾ. ಕೆ. ಚಿನ್ನಪ್ಪ ಗೌಡ
8.	ಮಗೆ ಬರವು ಕಲ್ತೆ	:	ಕನರಾಡಿ ವಾದಿರಾಜ ಭಟ್
9.	ಮಾಯಾಂದಾಳ್	:	ಯಶವಂತಿ ಸುವರ್ಣ
10.	ಕಲ್ಲುರ್ಟಿ ಕಲ್ಕುಡೆ	:	ಅಮೃತ ಸೋಮೇಶ್ವರ
11.	ಬನ್ನಾಲ್	:	ಕ್ಯಾಥರಿನ್ ರಾಡ್ರಿಗಸ್
12.	ಮಾಮಿ ಮರ್ಮಲ್	:	ಡಾ. ಗಣನಾಥ ಶೆಟ್ಟಿ ಎಕ್ಕಾರು
13.	ಜೋಗಿ ಪುರುಸೆರ್	:	ಕುದ್ಕಾಡಿ ವಿಶ್ವನಾಥ ರೈ
14.	ಅಗೋಳಿ ಮಂಜನೆ	:	ಗಣೇಶ ಅಮೀನ್ ಸಂಕಮಾರ್
15.	ಕಣ್ಣ್‌ಡ್ ತೂವಂದಿನ ಕೆಬಿಟ್ ಕೇನಂದಿನ	:	ಕೆ. ಆರ್. ರೈ
16.	ನಾಗಸಿರಿ	:	ಅನಂತರಾಮ ಬಂಗಾಡಿ
17.	ಮಾಯೊದ ಪೊಣ್ಣು	:	ಡಿ. ಯದುಪತಿ ಗೌಡ
18.	ಮುಡಿಪ್ಪೆರಾವಂದಿ ಮಲ್ಲಿಗೆ	:	ಎನ್. ಕೊಯಿರಾ ಬಾಳೆಪುಣಿ
19.	ಅಪ್ಪೊದಡ್ಯೆ	:	ಮುದ್ದು ಮೂಡುಬೆಳ್ಳೆ
20.	ಭೂತಾಳ ಪಾಂಡ್ಯೆ	:	ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್